ಅಧ್ಯಾಯ-೮
ಸಾರ್ವತ್ರಿಕ ಆಡಳಿತ

ತಾಲೂಕಿನ ಸಾರ್ವತ್ರಿಕ ಆಡಳಿತದಲ್ಲಿ ಗ್ರಾಮಗಳು ಪ್ರಾಚೀನ ಕಾಲದಿಂದಲೂ ಪ್ರಮುಖ ಆಡಳಿತ ಘಟಕಗಳಾಗಿ ಬೆಳೆದು ಬಂದಿವೆ. ವೇದಗಳ ಕಾಲದಲ್ಲಿ 'ಗಾಮಿಣಿ'ಯು ಗ್ರಾಮದ ಮುಖ್ಯಸ್ಥನಾಗಿದ್ದನು. ಆತನ ಆಡಳಿತದ ನೆರವಿಗೆ ಸಭಾ ಮತ್ತು ಸಮಿತಿ ಗಳಿದ್ದವು. ಕುಟುಂಬದ ಜಾತಿ, ಕಟ್ಟುಪಾಡುಗಳ ಶಿಸ್ತಿನ ಅನುಷ್ಠಾನಕ್ಕೆ 'ಯಜಮಾನ' ಅಥವಾ 'ಮುಖಂಡ' ಅಥವಾ 'ಹತ್ತರ ಮನುಷ್ಯ' ಯತ್ನಿಸುತ್ತಿದ್ದು, ಗ್ರಾಮಮಟ್ಟದಲ್ಲಿ 'ಸರಪಂಚರು', ಊರ ಯಜಮಾನರು', 'ಗೌಡಿಕೆಯವರು' ಆಡಳಿತದ ನೇತಾರರಾಗಿದ್ದರು. ಕೌಟುಂಬಿಕ ಹಿನ್ನೆಲೆಯಲ್ಲಿ ಮಾತೃಪ್ರಧಾನ, ಪಿತೃಪ್ರಧಾನ ವ್ಯವಸ್ಥೆಗಳಿದ್ದು ಕ್ರಮೇಣ ಇದು ಪಿತೃಪ್ರಧಾನ ನೆಲೆಯಲ್ಲೇ ಭದ್ರಬುನಾದಿ ಪಡೆದುಕೊಂಡಿದೆ. ಜಾತಿ ಪಂಚಾಯಿತಿಗಳಲ್ಲಿ 'ಕೂಟ'ದ ವ್ಯವಸ್ಥೆ ಇದ್ದು ಅದರ ಪ್ರಧಾನರಾಗಿರುವ ಗೌರವಯುತ ವ್ಯಕ್ತಿತ್ವದ 'ದೊಡ್ಡಯಜಮಾನ'ರಿಗೆ ಬೆಂಬಲವಾಗಿ ಚಿಕ್ಕಯಜಮಾನ, ನಾಡುದೇಶದ ಯಜಮಾನ, ಗಡಿಯಜಮಾನ, ಹಸಿರು ವೀಳ್ಯದ ಯಜಮಾನರು ಕಾರ್ಯ ನಿರ್ವಹಿಸುತ್ತಿದ್ದರು. ಮದುವೆ, ಜಾತಿಕಟ್ಟುಪಾಡು, ತಪ್ಪಿತಸ್ಥರ ವಿಚಾರಣೆ, ಪರಿಹಾರಕಾರ್ಯ, ಆಸ್ತಿವಿಭಾಗ ಮುಂತಾದ ಸಂದರ್ಭಗಳಲ್ಲಿ ಕೂಟಗಳು ಪ್ರಧಾನ ಪಾತ್ರ ವಹಿಸುತ್ತಿದ್ದವು. ಇಂತಹ ಹಲವಾರು ಕೂಟಗಳನ್ನು ಒಳಗೊಂಡ ಗ್ರಾಮಗಳು ಒಂದು ಕಟ್ಟೆಮನೆಗೆ ಸೇರುತ್ತವೆ. ಇಂಥ ಕೆಲವು ಕಟ್ಟೆಮನೆಗಳು ಸೇರಿ ಒಂದು ಗಡಿಮನೆ ಆಗುತ್ತಿತ್ತು. 'ಕೂಟ'ದ ನಿರ್ಣಯಗಳನ್ನು ಧಿಕ್ಕರಿಸಿದವರಿಗೆ ಜಾತಿ ಬಹಿಷ್ಕಾರ ಹಾಕುವ, ಬೆಂಕಿ-ಬಿಸಿನೀರು ನೀಡದಂತಿರುವ ಉಗ್ರ ಕಟ್ಟುಪಾಡುಗಳೂ ಚಾಲ್ತಿಯಲ್ಲಿದ್ದುವು. ಇಂದಿನ ಬದಲಾದ ಪರಿಸ್ಥಿತಿಯಲ್ಲಿ 'ಜಾತಿ ಪಂಚಾಯಿತಿ'ಗಳು ಸೊರಗಿವೆಯಾದರೂ ಆದಿಜಾಂಬವ, ಆದಿಕರ್ನಾಟಕ, ಕ್ಷೌರಿಕ, ನಾಯಕ ಮುಂತಾದವರಲ್ಲಿ ಅಲ್ಲಲ್ಲಿ ಈಗಲೂ ಕಟ್ಟುನಿಟ್ಟಾಗಿ ಅನುಸರಿಸಲಾಗುತ್ತಿದೆ.

ಇನ್ನು ಸ್ಥಳೀಯ ಸಂಸ್ಥೆಗಳಾಗಿ ಆಡಳಿತ ಜವಾಬ್ದಾರಿಯನ್ನು ವಹಿಸಿಕೊಂಡಿದ್ದ ಪಟ್ಟಣ, ಅಗ್ರಹಾರ, ಗ್ರಾಮಗಳ ಅಭಿವೃದ್ಧಿಯಲ್ಲಿ ಶ್ರಮ ವಹಿಸುತ್ತಿದ್ದ ಪಂಚಾಯತಿಗಳ ಪಾತ್ರ ಕೂಡ ಗಮನಾರ್ಹ. ಗಂಗರಸರ ಕಾಲದಿಂದಲೂ ಕನ್ನಡನಾಡಿನ ಗ್ರಾಮಗಳು

ಬಹುಮಟ್ಟಿಗೆ ಸ್ವಾಯತ್ತತೆ, ಪ್ರಜಾಸತ್ತಾತ್ಮಕ ಆಡಳಿತ ವ್ಯವಸ್ಥೆಯನ್ನು ಹೊಂದಿದ್ದುದನ್ನು ಶಾಸನಗಳು ತಿಳಿಸುತ್ತವೆ. ನಂಜನಗೂಡು ಪ್ರದೇಶದ ಪ್ರಮುಖ ಪಾಳೆಯಪಟ್ಟಾಗಿದ್ದ 'ಪದಿನಾಲ್ಕು ನಾಡು' ಆಡಳಿತ ವ್ಯವಸ್ಥೆಯಲ್ಲಿ ಈ ರೀತಿಯ ಅಧಿಕಾರ ವಿಕೇಂದ್ರೀಕರಣವಿದ್ದುದನ್ನು ಈಗಾಗಲೇ ಗಮನಿಸಲಾಗಿದೆ.

ಪ್ರತಿ ಗ್ರಾಮದಲ್ಲೂ ಇರುತ್ತಿದ್ದ ಗ್ರಾಮಸಭೆಗಳು ಸಾರ್ವಜನಿಕರ ಸಂಪತ್ತು ರಕ್ಷಣೆ; ನ್ಯಾಯ ಪರಿಪಾಲನೆ; ದಾನ-ದತ್ತಿ ಸ್ವೀಕರಣೆ ಹಾಗೂ ಸಮರ್ಪಕ ವಿತರಣೆ; ಗೋಷ್ಠಿ ನಿರ್ವಹಣೆ; ದೇವಾಲಯ, ಕೆರೆ, ಕಾಲುವೆ, ಬಾವಿ, ಧರ್ಮಶಾಲೆ, ಅನ್ನಸತ್ರ, ಅರವಟ್ಟಿಗೆ ಮುಂತಾದ ಸಾರ್ವಜನಿಕ ಹಿತಾಸಕ್ತಿ ವಿಷಯಗಳ ನಿರ್ವಹಣೆ; ಗ್ರಾಮದ ಆಯಗಾರರ ಹಿತರಕ್ಷಣೆ; ಕಂದಾಯ ಸ್ವೀಕೃತಿ ಹಾಗೂ ರಾಜರಿಗೆ ರವಾನೆ; ಅಸಹಾಯಕರಿಗೆ ನೆರವು ನೀಡುವಿಕೆ; ಗ್ರಾಮದ ರಕ್ಷಣೆಗಾಗಿ ಹೋರಾಡಿ-ಮಡಿದ ವೀರರಿಗೆ ಗೌರವ ಸಲ್ಲಿಸುವಿಕೆ ಮುಂತಾದ ವೈವಿಧ್ಯಮಯ ಜವಾಬ್ದಾರಿಯನ್ನೂ ಹೊಂದಿರುತ್ತಿದ್ದುವು. ರಾಜಾಡಳಿತವೂ ಕೂಡ ಈ ಗ್ರಾಮಸಭೆಗಳ ಹಕ್ಕು ಮತ್ತು ಗೌರವಗಳನ್ನು ರಕ್ಷಿಸುತ್ತಿತ್ತು.

ಆಧುನಿಕ ಕಾಲದಲ್ಲಿ ತಾಲೂಕುಗಳ ಆಡಳಿತವನ್ನು ತಹಶಿಲ್ದಾರರು ನಿರ್ವಹಿಸುತ್ತಿದ್ದು, ಅವರ ನೆರವಿಗೆ ಶಿರಸ್ತೇದಾರರು, ಕಂದಾಯ ನಿರೀಕ್ಷಕರು, ಗ್ರಾಮಲೆಕ್ಕಿಗರು ಹಾಗೂ ಗ್ರಾಮ ಸಹಾಯಕರು, ಆಡಳಿತದ ವಿವಿಧ ಹಂತಗಳಲ್ಲಿ ತಹಶೀಲ್ದಾರರ ನಿಯಂತ್ರಣದಲ್ಲಿ ಕಾರ್ಯ ನಿರ್ವಹಿಸುತ್ತಾರೆ. ತಹಶೀಲ್ದಾರರು ಜಿಲ್ಲಾಧಿಕಾರಿ ಹಾಗೂ ಉಪವಿಭಾಗಾಧಿಕಾರಿಗಳ ಉಸ್ತುವಾರಿಯಲ್ಲಿ ಕಾರ್ಯ ನಿರ್ವಹಿಸುತ್ತಾರೆ.

ತಹಶೀಲ್ದಾರರು : ಹಿಂದೆ ಅಮಿಲ್ದಾರ(ಮಾಮಲೆದಾರ)ರೆಂದೂ ಕರೆಯಲ್ಪಡುತ್ತಿದ್ದ ಇವರು ತಾಲೂಕಿನ ಸಾಮಾನ್ಯ ಆಡಳಿತದ ಮಂಚೂಣಿಯಲ್ಲಿದ್ದು, ಇವರ ನೆರವಿಗೆ ಶಿರಸ್ತೇದಾರ್ (ಉಪತಹಶೀಲ್ದಾರ್), ಕಂದಾಯ ವೃತ್ತಗಳಲ್ಲಿ ಕಂದಾಯ ನಿರೀಕ್ಷಕರು, ವಿಶೇಷ ಕಂದಾಯ ನಿರೀಕ್ಷಕ, ದಾಖಲೆ ರಕ್ಷಕ ಹಾಗೂ ಇತರ ಸಿಬ್ಬಂದಿ ವರ್ಗವಿದೆ. ಉಪವಿಭಾಗಾಧಿಕಾರಿಗಳು ಇವರ ತಕ್ಷಣದ ಮೇಲಧಿಕಾರಿಗಳಾಗಿದ್ದು ಜಿಲ್ಲಾಧಿಕಾರಿಗಳ ಸೂಚನೆಯಂತೆ ಇವರು ಕಾರ್ಯನಿರ್ವಹಿಸುತ್ತಾರೆ. ತಾಲೂಕಿನಲ್ಲಿ ಭೂಒತ್ತುವರಿ ಸೇರಿದಂತೆ ವಿವಿಧ ಭೂ ವ್ಯವಹಾರಗಳಿಗೆ ಸಂಬಂಧಿಸಿದಂತೆ, ನಿರ್ಣಾಯಕ ಪಾತ್ರವಹಿಸುವ ಇವರು ಕಂದಾಯ ಆಕರಣೆ ಮತ್ತು ಸಂಗ್ರಹಣೆ, ತಕಾವಿ ಸಾಲ ಮರುಪಾವತಿ, ಭೂಅಭಿವೃದ್ಧಿ ಸಾಲದ ಸದ್ವಿನಿಯೋಗದ ಪರಿಶೀಲನೆ, ನೀರಾವರಿ ಶುಲ್ಕ, ಪೋಟ್‌ಹಿಸ್ಸಾ, ಮಾಪನ ಶುಲ್ಕ ಸಂಗ್ರಹ ಮುಂತಾದ ಜವಾಬ್ದಾರಿಯನ್ನು ಹೊಂದಿರುತ್ತಾರೆ. ತಾಲೂಕಿನ ಮುಖ್ಯಸ್ಥನಾಗಿ ಆಹಾರ ದಾಸ್ತಾನುಗಳ ಕ್ರಮಬದ್ಧ ಖರೀದಿ ಹಾಗೂ ನ್ಯಾಯಬೆಲೆ ಅಂಗಡಿಗಳ ಮೂಲಕ ವ್ಯವಸ್ಥಿತವಾಗಿ ವಿತರಣೆ ಮಾಡುವ ಹೊಣೆಯೂ ಇವರದಾಗಿದ್ದು, ಲೆವಿ-ಬತ್ತ, ಅಕ್ಕಿ ಸಂಗ್ರಹಣೆ, ಜೊತೆಗೆ ವಿವಿಧ ಅಕ್ಕಿಗಿರಣಿಗಳಲ್ಲಿ ಹಾಗೂ ಕೃಷಿ ಉತ್ಪನ್ನ ಸಹಕಾರಿ ಮಾರುಕಟ್ಟೆ ಸಂಘಗಳಲ್ಲಿರುವ ದಾಸ್ತಾನುಗಳ ಪರಿಶೀಲನೆ ಮಾಡಬೇಕಾಗುತ್ತದೆ. ವೃದ್ಧಾಪ್ಯವೇತನ ಮಂಜೂರು ಮಾಡುವುದು ಇವರ ಕರ್ತವ್ಯವಾಗಿದ್ದು, ತಾಲೂಕು

ಮಾಜಿಸ್ಟ್ರೇಟರಾಗಿ ತಾಲೂಕಿನಲ್ಲಿ ಶಾಂತಿ ಹಾಗೂ ಕಾನೂನು ಪರಿಪಾಲಿಸಲು ಸೂಕ್ತ ಕ್ರಮ ತೆಗೆದುಕೊಳ್ಳುವ ಅಧಿಕಾರವೂ ಇವರಿಗಿರುತ್ತದೆ. ಸಹಾಯಕ ಚುನಾವಣಾ ನೊಂದಣಾಧಿಕಾರಿಯಾಗಿ, ಮತಪಟ್ಟಿಯ ರಚನೆ, ಪರಿಷ್ಕರಣೆ ಇವರ ಜವಾಬ್ದಾರಿಯಾಗಿದ್ದು, ತಾಲೂಕು ಮಟ್ಟದಲ್ಲಿ ಸಹಾಯಕ ನಿರ್ವಾಚನ ಚುನಾವಣಾಧಿಕಾರಿಯಾಗಿ ಚುನಾವಣೆಯ ಉಸ್ತುವಾರಿಯನ್ನು ನಿರ್ವಹಿಸಬೇಕಾಗುತ್ತದೆ.

ಕ್ಷೇತ್ರಾಭಿವೃದ್ಧಿ ಅಧಿಕಾರಿ ಕಚೇರಿ : ತಾಲೂಕಿನ ಅಭಿವೃದ್ಧಿ ಕಾರ್ಯಗಳ ಅನುಷ್ಠಾನ ಹಾಗೂ ನಿರ್ವಹಣೆ ಈ ಅಧಿಕಾರಿಯ ಹೊಣೆಯಾಗಿದ್ದು, ತಾಲೂಕು ಅಭಿವೃದ್ಧಿ ಸಮಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಇವರಾಗಿರುತ್ತಿದ್ದರು. ಆದರೆ ೧೯೮೩ರ ಜಿಲ್ಲಾ ಪರಿಷತ್ ಕಾಯ್ದೆ ಹಾಗೂ ೧೯೯೩ರ ಜಿಲ್ಲಾ ಪಂಚಾಯತ್ ಕಾಯ್ದೆಗಳಿಂದಾಗಿ ಇಂದು ತಾಲೂಕು ಪಂಚಾಯಿತಿ ಸಮಿತಿ ಎಂದು ನಾಮಾಂಕಿತಗೊಂಡಿದ್ದು, ನಿರ್ವಾಹಣಾಧಿಕಾರಿಗಳು ಮುಖ್ಯಸ್ಥರಿದ್ದು, ಜಿಲ್ಲಾ ಪಂಚಾಯತಿಯ ಉಸ್ತುವಾರಿಯಲ್ಲಿ ಕಾರ್ಯ ನಿರ್ವಹಿಸಬೇಕಾಗಿದ್ದು, ಅವರ ನೆರವಿಗೆ ವ್ಯವಸ್ಥಾಪಕರು ಹಾಗೂ ಇತರ ಸಿಬ್ಬದಿ ವರ್ಗವಿರುತ್ತದೆ.

ಕಂದಾಯ ನಿರೀಕ್ಷಕರು : ತಾಲೂಕಿನಲ್ಲಿರುವ ಐದು ಹೋಬಳಿ ಕಂದಾಯ ವೃತ್ತಗಳ ಆಡಳಿತ ನಿರ್ವಹಣೆಗೆ ಪ್ರತ್ಯೇಕ ಕಂದಾಯ ನಿರೀಕ್ಷಕರಿರುತ್ತಾರೆ. ಕಂದಾಯ ವಿಷಯಗಳಿಗೆ ಸಂಬಂಧಿಸಿದಂತೆ ತಹಶೀಲ್ದಾರರ ನೇರ ಉಸ್ತುವಾರಿಯಲ್ಲಿ ಕಾರ್ಯನಿರ್ವಹಿಸುವ ಕಂದಾಯ ನಿರೀಕ್ಷಕರು ಭೂಕಂದಾಯ, ಅಭಿವೃದ್ಧಿ ಶುಲ್ಕ, ನೀರಾವರಿ ಶುಲ್ಕ, ಇತರೆ ಸರ್ಕಾರಿ ಬಾಕಿ, ಸಾಲ ಹಾಗೂ ಮುಂಗಡಗಳ ಮರುಪಾವತಿ ಮುಂತಾದವುಗಳ ಶೇಖರಣೆ, ಆಹಾರಧಾನ್ಯಗಳ ಖರೀದಿ ಮತ್ತು ವಿತರಣೆ ಮುಂತಾದವುಗಳನ್ನು ನಿಭಾಯಿಸಬೇಕಾಗುತ್ತದೆ. ಗ್ರಾಮಲೆಕ್ಕಿಗರ ಕಾರ್ಯವೈಖರಿಯ ಮೇಲ್ವಿಚಾರಕರಾಗಿದ್ದು, ಗ್ರಾಮಗಡಿಯ ತಪಾಸಣೆ, ಸರ್ಕಾರಿ ಜಮೀನಿನ ಒತ್ತುವರಿ ಮುಂತಾದವನ್ನೂ ಗಮನಿಸಬೇಕಾಗುತ್ತವೆ. ಉಂಬಳಿ ಜಮೀನಿನ ದಾಖಲೆಗಳ ಸಂಯೋಜನೆ, ಭೂಸ್ವಾಧೀನಗಳಂತಹ ಕಂದಾಯ ವಿಷಯಗಳ ಜೊತೆಗೆ, ವೃದ್ಧಾಪ್ಯವೇತನ ಮಂಜೂರಾತಿಗೆ ಪೂರಕ ತಪಾಸಣೆಯಂತಹ ಕಾರ್ಯಗಳನ್ನು ಇವರು ನಿರ್ವಹಿಸಬೇಕಾಗುತ್ತದೆ.

ನಾಡಕಚೇರಿ : ಅಧಿಕಾರ ವಿಕೇಂದ್ರೀಕರಣ ಹಾಗೂ ತಾಲೂಕು ಕಚೇರಿಗಳ ಮೇಲಿನ ಕಾರ್ಯಒತ್ತಡವನ್ನು ಹಗುರಗೊಳಿಸುವುದಕ್ಕಾಗಿ ೧೫-೦೮-೧೯೮೬ರಿಂದ ತಾಲೂಕಿನಲ್ಲೊಂದು ಹೋಬಳಿ ಕೇಂದ್ರದಲ್ಲಿ ನಾಡಕಚೇರಿಯನ್ನು ಪ್ರಯೋಗಾರ್ಥವಾಗಿ ಆರಂಭಿಸಲು ಹಮ್ಮಿಕೊಂಡ ಯೋಜನೆಯಂತೆ ತಾಲೂಕಿನ ಹೋಬಳಿ ಕೇಂದ್ರದಲ್ಲಿ ನಾಡಕಚೇರಿಯನ್ನು ಆರಂಭಿಸಲಾಗಿದೆ. ಈ ಕಚೇರಿಗೆ ಶಿರಸ್ತೇದಾರರು ಮುಖ್ಯಸ್ಥರಾಗಿದ್ದು, ತಹಶೀಲ್ದಾರರ ಒಂಭತ್ತು ಕಾರ್ಯಗಳ ನಿರ್ವಹಣೆಯನ್ನು ಇವರಿಗೆ ವಹಿಸಿಕೊಡಲಾಗಿದೆ. ಅವರ ನೆರವಿಗೆ ಸಿಬ್ಬಂದಿವರ್ಗವಿದ್ದು, ತಹಶೀಲ್ದಾರರು ಇವರ ತಕ್ಷಣದ ಮೇಲಧಿಕಾರಿಗಳಾಗಿರುತ್ತಾರೆ.

ಗ್ರಾಮಲೆಕ್ಕಿಗರು : ಪ್ರಾಚೀನ ಕಾಲದಲ್ಲಿ ಗ್ರಾಮಗಳ ಆಡಳಿತ ನಿರ್ವಹಣೆಗೆ ಆರಂಭದಲ್ಲಿ ಎಂಟು ನಂತರ ಹನ್ನೆರಡು ಜನ ಆಯಗಾರರು (ಬಾರಾಬಲೂತಿ) ಗ್ರಾಮದ ವಿವಿಧ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಆದರೆ ೧೯೪೭ರ ವೇಳೆಗೆ ಅವುಗಳಲ್ಲಿ ಗೌಡ, ಶಾನುಭೋಗ, ತೋಟಿ, ತಲಾರಿ ಹಾಗೂ ನೀರ್ಗಂಟಿಗಳಷ್ಟೆ ಚಾಲ್ತಿಯಲ್ಲಿ ಉಳಿದಿದ್ದರು. ಆದರೆ ಸ್ವಾತಂತ್ರ್ಯನಂತರದಲ್ಲಿ ಇದ್ದ ವಂಶವಾರು ಶಾನುಭೋಗಿಕೆಯನ್ನು ೧೯೭೦ರ ಕಾಯ್ದೆಯನ್ವಯ ರದ್ದುಗೊಳಿಸಲಾಯಿತು. ಆಗ ಗ್ರಾಮಾಡಳಿತವನ್ನು ಗ್ರಾಮಲೆಕ್ಕಿಗರಿಗೆ ವಹಿಸಿಕೊಡಲಾಯಿತು. ಆಡಳಿತದ ಕೆಳಘಟಕದ ಮುಖ್ಯಸ್ಥರಾದ ಇವರು ಸರ್ಕಾರ ಸಮಾಜಗಳ ನಡುವಣ ಕೊಂಡಿಯಾಗಿದ್ದು, ಗ್ರಾಮದಾಖಲೆಗಳ ಸಂರಕ್ಷಣೆ ಹಾಗೂ ಕಂದಾಯ ಶೇಖರಣೆ ಇವರ ಹೊಣೆಯಾಗಿರುತ್ತದೆ. ಹಿಂದಿನ ಶಾನುಭೋಗರ ಅಧಿಕಾರಗಳನ್ನೇ ಹೊಂದಿರುವ ಇವರ ನೆರವಿಗೆ ಗ್ರಾಮಸಹಾಯಕರಿರುತ್ತಾರೆ.

ಗ್ರಾಮಸಹಾಯಕರು : ಹಿಂದೆ ಗ್ರಾಮಗಳಲ್ಲಿ ಶಾನುಭೋಗ, ಕುಲಕರ್ಣಿ ಅಥವಾ ಪಾಟೀಲರಿಗೆ ಸಹಾಯಕರಾಗಿ ಕೆಲಸ ಮಾಡುತ್ತಿದ್ದ ತಳವಾರ, ಓಲೇಕಾರ, ತೋಟಿ ಮುಂತಾದ ಹುದ್ದೆಗಳಿಗೆ ಬದಲು, ಪ್ರಸ್ತುತ ಗ್ರಾಮಸಹಾಯಕರನ್ನು ನೇಮಿಸಲಾಗಿದೆ. ಗ್ರಾಮಸಿಪಾಯಿ ಎಂದೂ ಕೆಲವೆಡೆ ಕರೆಯಲ್ಪಡುವ ಇವರು ಗ್ರಾಮಲೆಕ್ಕಿಗರ ಸಹಾಯಕರಾಗಿ, ಸಂದೇಶವಾಹಕರಾಗಿ ದಫ್ತರು ಸಾಗಿಸುವ ಹಾಗೂ ಭೂಸರ್ವೇಕ್ಷಣ ಸಂದರ್ಭದಲ್ಲಿ ಜಮೀನನ್ನು ಅಳೆಯಲು ಬಳಸುವ ಸರಪಳಿ ಮುಂತಾದ ಸಲಕರಣೆಗಳನ್ನು ಸಾಗಿಸಲು ಕೆಲಸಗಳಲ್ಲಿ ನೆರವಾಗುತ್ತಾರೆ.

ಕಂದಾಯ ಆಡಳಿತ : ಆಡಳಿತಯಂತ್ರದ ನಿರ್ವಹಣೆ ಹಾಗೂ ಸಮಾಜಕಲ್ಯಾಣಕಾರ್ಯಗಳ ಅನುಷ್ಟಾನಕ್ಕಾಗಿ ಭೂಕಂದಾಯ, ಆಸ್ತಿತೆರಿಗೆ, ಪ್ರವೇಶಶುಲ್ಕ, ವೃತ್ತಿ ತೆರಿಗೆ, ಮುಂತಾದ ತೆರಿಗೆಗಳನ್ನು ಬಹು ಹಿಂದಿನಿಂದಲೂ ವಿಧಿಸಲಾಗುತ್ತಿತ್ತು. ಅದರಲ್ಲೂ ಕೃಷಿ ಪ್ರಧಾನ ಸಮಾಜದಲ್ಲಿ ಭೂಕಂದಾಯವೇ ಸರ್ಕಾರಗಳ ಪ್ರಧಾನ ಆದಾಯ ಮೂಲವಾಗಿತ್ತು. ಭೂಮಾಪನ ಆಧಾರಿತ ಕಳನಿ, ಮತ್ತರು, ನಿವರ್ತನ, ಕಂಬ, ಕುಳಿಗಳೆಂಬ ಭೂಪ್ರಮಾಣ; ಬಿತ್ತನೆ ಸಾಮರ್ಥ್ಯವನ್ನು ಆಧರಿಸಿದ ಖಂಡುಗ, ಕೊಳಗ, ಬಳ್ಳ, ವೆಲಿ, ಮುಂತಾದ ಭೂಪ್ರಮಾಣಗಳು ಅಸ್ತಿತ್ವದಲ್ಲಿದ್ದು ಪ್ರಾಕೃತಿಕ ಅಂಶಗಳ ಜೊತೆಗೆ ಅವುಗಳನ್ನು ಆಧರಿಸಿ ಭೂಕಂದಾಯವನ್ನು ನಿರ್ಧರಿಸಿ, ಷಡ್ಭಾಗ, ದಶಭಾಗ, ಕುಳಾಯ ಎಂಬ ಹೆಸರಲ್ಲಿ ಅದನ್ನು ಸಂಗ್ರಹಿಸಲಾಗುತ್ತಿತ್ತು. ಭೂಆಡಳಿತಕ್ಕೆ ಸಂಬಂಧಿಸಿದಂತೆ ಖಾಸಗಿ ಜಮೀನಿನ ಗಡಿಯನ್ನೂ ಗ್ರಾಮಗಡಿಯನ್ನೂ ನಿರ್ಧರಿಸಲು ಪ್ರಾಕೃತಿಕ ಅಂಶಗಳ ಜೊತೆಗೆ ಲಿಂಗಮುದ್ರೆ, ಮುಕ್ಕೊಡೆ, ವಾಮನಮುದ್ರೆ ಕಲ್ಲುಗಳನ್ನು ಗಡಿಕಲ್ಲಾಗಿ ನಿಲ್ಲಿಸಲಾಗುತ್ತಿದ್ದ ಅಂಶ ತಾಲೂಕಿನ ವಿವಿಧ ಶಾಸನಗಳಲ್ಲಿ ವ್ಯಕ್ತವಾಗಿದ್ದು, ಸುಂಕ, ತೆರೆ (ಮನೆದೆರೆ, ಹೊಸ್ತಿಲಪಣ) ಮಗ್ಗದೆರೆ, ಮಾರ್ಗಾದಾಯ, ಗಾಣದೆರೆ, ಸಾದದೆರೆ ಮುಂತಾದ ತೆರಿಗೆಗಳ ಪ್ರಸ್ತಾಪವೂ ಇದೆ. ಶಾಸನಗಳಲ್ಲಿ ಗದ್ದೆ, ಹೊಲ, ತೋಟ, ಮುಂತಾದ ಭೂವರ್ಗಗಳ ಉಲ್ಲೇಖವಿದೆ.

ವಿಜಯನಗರ ಹಾಗೂ ಮೈಸೂರರಸರ ಆಡಳಿತದಲ್ಲಿ ಕೃಷಿಕ್ಷೇತ್ರಕ್ಕೆ ಹೆಚ್ಚಿನ ಆಸ್ಥೆ ನೀಡಲಾಯಿತು. ಈ ಅವಧಿಯಲ್ಲಿ ಕೃಷಿ ಉತ್ಪನ್ನದ ೧/೬ ಭಾಗದಿಂದ ೧/೩ ಭಾಗವನ್ನೂ, ಕೆಲವೊಮ್ಮೆ ೧/೨ ಭಾಗವನ್ನೂ ಕಂದಾಯವಾಗಿ ಪಡೆಯಲಾಗುತ್ತಿತ್ತು. ಕಂದಾಯವನ್ನು ಧನ–ಧಾನ್ಯ ರೂಪದಲ್ಲಿ ಸಂಗ್ರಹಿಸಲಾಗುತ್ತಿತ್ತು. ಕಂದಾಯ ಸೋರಿಕೆ, ರೈತ ಶೋಷಣೆ ಹಾಗೂ ಜಮೀನ್ದಾರರ ದಬ್ಬಾಳಿಕೆಯನ್ನು ನಿಯಂತ್ರಿಸಲು ತಾಲೂಕಿಗೆ ಇಬ್ಬರು ಹರಿಕಾರ (ಗೂಢಚಾರ)ರನ್ನು ಹೈದರನು ನೇಮಿಸಿದ್ದನು. ದಿವಾನ್ ಪೂರ್ಣಯ್ಯನವರ ಕಾಲದಲ್ಲಿ ಭೂಕಂದಾಯ ವ್ಯವಸ್ಥೆಯು ಸಾಕಷ್ಟು ಸುಧಾರಿಸಲ್ಪಟ್ಟಿತು. ಪ್ರತಿ ತಾಲೂಕಿಗೂ ಅಮಲ್ದಾರರಿರುತ್ತಿದ್ದು, ಅವರ ನೆರವಿಗೆ ಮೂವರು ಸುಭೇದಾರರಿರುತ್ತಿದ್ದರು. ಹೋಬಳಿ ಮಟ್ಟದಲ್ಲಿ ಪಾರುಪತ್ಯೇದಾರರಿದ್ದು, ಅವರ ನೆರವಿಗೆ ಮಣೆಗಾರ ಹಾಗು ಗಡಿಶಾನುಭೋಗರು ಇರುತ್ತಿದ್ದರು. ಕಮೀಷನರುಗಳ ಆಡಳಿತಾವಧಿಯಲ್ಲಿ ಭೂಕಂದಾಯ ನಿಗಧಿಪಡಿಸಲು ಭೂಸರ್ವೇಕ್ಷಣ ಕಾರ್ಯದ ರೂಪು–ರೇಷೆಯನ್ನು ರಚಿಸಲಾಯಿತು. ಅದರಂತೆ ಬೌರಿಂಗ್ ಆಡಳಿತದಲ್ಲಿ (೧೮೬೨–೭೦) ಕೃಷಿ ಭೂಮಿಯನ್ನು ಮೊದಲ ಬಾರಿಗೆ ಅಳೆದು ಸರ್ವೇಕ್ಷಣ ಸಂಖ್ಯೆ ನೀಡುವ ಕಾರ್ಯ ಆರಂಭವಾಯಿತು. ಅನಂತರ ೧೮೭೭–೭೮ರಲ್ಲಿ ಸಂಸ್ಥಾನದಲ್ಲಿ ಭೂಸರ್ವೇಕ್ಷಣ ನಡೆಸಿ, ಫಲವತ್ತತೆ ಆಧಾರದ ಮೇಲೆ ಭೂಮಿಯನ್ನು ಆಣೆವಾರಿ ವರ್ಗೀಕರಿಸಿ, ಕಂದಾಯವನ್ನು ನಿಗದಿಪಡಿಸಲಾಯಿತು. ಮೊದಲ ಸರ್ವೇಕ್ಷಣದಲ್ಲಿ ಇಡೀ ತಾಲೂಕನ್ನೇ ಒಂದು ಘಟಕವನ್ನಾಗಿ ಪರಿಗಣಿಸಿ ಕಂದಾಯವನ್ನು ಸಾರಸಗಟಾಗಿ ನಿಗದಿಪಡಿಸಲಾಗಿತ್ತು. ಆದರೆ ನಂತರದಲ್ಲಿ ತಾಲೂಕನ್ನು ಪ್ರಾದೇಶಿಕ ಗುಂಪುಗಳಾಗಿ ವರ್ಗೀಕರಿಸಿ, ವಿವಿಧ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಹಿಂದಿನ ೩೦ ವರ್ಷಗಳ ವಿವರವನ್ನು ಆಧರಿಸಿ ಕಂದಾಯವನ್ನು ನಿರ್ಧರಿಸಲಾಯಿತು. ಹಾಗೆ ನಿರ್ಧರಿಸಲ್ಪಟ್ಟ ಕಂದಾಯದರವು ಮುಂದಿನ ೩೦ ವರ್ಷ ಕಾಲ ಚಾಲ್ತಿಯಲ್ಲಿರುವಂತಾಯಿತು. ಆ ಪ್ರಕಾರ ತಾಲೂಕಿನಲ್ಲಿ ಮೊದಲ ಕಂದಾಯ ನಿಗದಿ ಸರ್ವೇಕ್ಷಣ ದರವನ್ನು ೧೮೯೯ರಲ್ಲಿ ಜಾರಿಗೊಳಿಸಲಾಯಿತು. ಆಗ ತಾಲೂಕಿನಲ್ಲಿದ್ದ ಸರ್ಕಾರಿ ಗ್ರಾಮ, ಆರು ಕಾವಲ್ ಗ್ರಾಮ ಹಾಗೂ ೩೫ ಜೋಡಿ ಗ್ರಾಮಗಳಿದ್ದವು. ಮೂವತ್ತು ವರ್ಷಗಳ ನಂತರ ಮೊದಲ ಕಂದಾಯ ನಿಗದಿ ಪರಿಷ್ಕರಣಾ ಸರ್ವೇಕ್ಷಣ ಕಾರ್ಯವನ್ನು ಕೈಗೊಳ್ಳಲಾಯಿತು. ಅನಂತರ ಎರಡನೆಯ ಕಂದಾಯ ನಿಗದಿ ಪರಿಷ್ಕರಣಾ ಸರ್ವೇಕ್ಷಣವನ್ನು ೧೯೫೮ಕ್ಕೆ ಬದಲು ಮೂರು ವರ್ಷ ತಡವಾಗಿ ೧೯೬೧ರಲ್ಲಿ ಕೈಗೊಳ್ಳಲಾಯಿತು.

ಏಕೀಕರಣದ ನಂತರ ಮತ್ತೆ ೧೯೬೪ರಲ್ಲಿ ಕಂದಾಯ ನಿಗದಿ ಪರಿಷ್ಕರಣಾ ಸರ್ವೇಕ್ಷಣ ಕಾರ್ಯವನ್ನು ಹಮ್ಮಿಕೊಳ್ಳಲಾಯಿತು. ಅದರಂತೆ ಪ್ರತಿಯೊಂದು ಜಮೀನನ್ನು ಕರಾರುವಕ್ಕಾಗಿ ಅಳೆದು, ಹವಾಗುಣ, ನೀರಾವರಿ ಮೂಲ, ಮಾರುಕಟ್ಟೆ ಸೌಲಭ್ಯ, ಸಾರಿಗೆ ಸೌಕರ್ಯ ಮುಂತಾದವನ್ನು ಪರಿಗಣಿಸಿ ಭೂಮಿಯನ್ನು ವರ್ಗೀಕರಿಸಿ ಪ್ರತಿ ವರ್ಗದ ಜಮೀನಿಗೂ ಸ್ಟ್ಯಾಂಡರ್ಡ್ ದರವನ್ನು ನಿಗದಿಪಡಿಸಲಾಯಿತು. ಅದರಂತೆ ಹದಿನಾಲ್ಕನೆಯ ವಲಯದಲ್ಲಿದ್ದ ನಂಜನಗೂಡು ತಾಲೂಕಿನ ಭೂಮಿಯನ್ನು ಒಂದನೆ

ದರ್ಜೆಯ ಗುಂಪಿಗೆ ಸೇರಿದ್ದೆಂದು ಪರಿಗಣಿಸಿ ಪ್ರತೀ ಎಕರೆ ಹೊಲಕ್ಕೆ ರೂ.೪.೨೧, ಗದ್ದೆಗೆ ರೂ.೧೦.೯೨ ಹಾಗೂ ತೋಟಕ್ಕೆ ರೂ.೧೫.೧೮ ಕಂದಾಯವನ್ನು ನಿಗದಿಪಡಿಸಲಾಯಿತು. ಆ ಸಂದರ್ಭದಲ್ಲಿ ತಾಲೂಕಿನಲ್ಲಿ ಒಟ್ಟು ೧೯೦ ಗ್ರಾಮಗಳಿದ್ದವು. ಪ್ರಮಾಣಿತ (ಸ್ಟ್ಯಾಂಡರ್ಡ್) ಕಂದಾಯ ದರವು, ಆಯಾ ವರ್ಗದ ಪ್ರತಿ ಎಕರೆ ಜಮೀನಿನ ಸರಾಸರಿ ಇಳುವರಿಯ ಒಟ್ಟು ಮೌಲ್ಯದ ಶೇಕಡ ನಾಲ್ಕರ ದರದಲ್ಲಿರುತ್ತಿತ್ತು. ಈ ಪರಿಷ್ಕೃತ ದರವು ಮುಂದಿನ ೩೦ ವರ್ಷಗಳ ಕಾಲ ಜಾರಿಯಲ್ಲಿರಬೇಕೆಂದು ತೀರ್ಮಾನಿಸಲಾಯಿತು.

ನೀರಾವರಿ ಕರ : ಸರ್ಕಾರಿ ಸ್ವಾಮ್ಯಕ್ಕೆ ಸೇರಿದ ಕೆರೆ, ಹೊಂಡ, ಕಾಲುವೆ, ಜಂಗಲ್, ಹಳ್ಳ, ಮುಂತಾದ ಜಲಮೂಲಗಳ ನೀರಾವರಿ ಸೌಕರ್ಯ ಹೊಂದಿರುವ ಜಮೀನಿಗೆ ವಿಧಿಸಿರುವ ಶುಲ್ಕವಿದಾಗಿದೆ. ಇದನ್ನು ಕೂಡ ಸರ್ವೇಕ್ಷಣ ಇಲಾಖೆಯೇ ನೀರಿನ ಲಭ್ಯತೆಯನ್ನು ಗಮನದಲ್ಲಿಟ್ಟುಕೊಂಡು ಪ್ರತೀ ವರ್ಷ ನಿಗದಿಪಡಿಸುತ್ತಿತ್ತು.

ನಿರ್ವಹಣೆ ಕರ : ಕರ್ನಾಟಕ ನೀರಾವರಿ ಕಾಯ್ದೆ (೧೯೬೫)ಯಂತೆ ಎಕರೆಗೆ ಪ್ರತಿವರ್ಷಕ್ಕೆ ರೂ. ನಾಲ್ಕು ನಿರ್ವಹಣಾಕರವನ್ನು ಆಕರಿಸಿ ವಸೂಲು ಮಾಡಲಾಗುತ್ತದೆ. ಆದರೆ ಸತತ ಎರಡು ವರ್ಷಕ್ಕಿಂತ ಹೆಚ್ಚು ಅವಧಿ ಜಮೀನಿಗೆ ನೀರು ಪೂರೈಕೆಯಾಗದಿದ್ದರೆ, ಇದರ ಆಕರಣೆ ಮಾಡುವಂತಿಲ್ಲ.

ಅಭಿವೃದ್ಧಿ ಶುಲ್ಕ ಹಾಗೂ ನೀರಾವರಿ ಕರಗಳನ್ನು ವಿಧಿಸುವಲ್ಲಿ ಏಕಪ್ರಕಾರದ ನೀರಾವರಿ ಕಾಯ್ದೆಯನ್ನು ೧೯೫೭ರಲ್ಲೂ ಮೈಸೂರು ನೀರಾವರಿ ನಿಯಮವನ್ನು ೧೯೬೫ರಲ್ಲೂ ಜಾರಿಗೊಳಿಸಲಾಯಿತು. ಮೊದಲು ಮಳೆ ಆಶ್ರಿತ ಗದ್ದೆಗೂ ನೀರಾವರಿ ಶುಲ್ಕ ವಿಧಿಸಲಾಗುತ್ತಿದ್ದು, ಸರ್ಕಾರಿ ಸ್ವಾಮ್ಯದ ಜಲಮೂಲವನ್ನು ಬೇಸಾಯಕ್ಕೆ ಬಳಸಿಕೊಂಡರೆ ಅದನ್ನು ಶೇ. ೩೨.೫ಕ್ಕೆ ಹೆಚ್ಚಿಸಲಾಗುತ್ತಿತ್ತು. ಆದರೆ ೧೯೮೦ರಲ್ಲಿ ಈ ಪದ್ಧತಿಯನ್ನು ರದ್ದುಪಡಿಸಲಾಯಿತು. ಮುಂದೆ ೧೯೮೫ರ ನೀರಾವರಿ ಕಾಯ್ದೆಯಂತೆ (ಪ್ರತಿ ಎಕರೆಗೆ) ೧೨ ತಿಂಗಳ ಕಬ್ಬಿನ ಬೆಳೆಗೆ ರೂ.೧೫೦, ೧೩–೧೮ ತಿಂಗಳ ಕಬ್ಬಿನ ಬೆಳೆಗೆ ರೂ.೨೨೫, ಬತ್ತದ ಮೊದಲ ಬೆಳೆಗೆ ರೂ.೩೫, ನಂತರದ ಪ್ರತಿಬೆಳೆಗೆ ರೂ.೪೦, ಗೋಧಿಗೆ ರೂ.೨೨, ಜೋಳಕ್ಕೆ ರೂ.೨೦, ಶೇಂಗಾ ರೂ.೨೪, ಹತ್ತಿಗೆ ರೂ.೪೦ ಮುಸುಕಿನ ಜೋಳ, ರಾಗಿ, ನವಣೆ, ಸಜ್ಜೆ, ಹುರುಳಿ, ಈರುಳ್ಳಿ, ಆಲೂಗಡ್ಡೆ, ಕೊತ್ತಂಬರಿ ಮುಂತಾದವಕ್ಕೆ ರೂ.೨೦, ಕಾಳುಗಳಿಗೆ ರೂ.೧೫, ಗೊಬ್ಬರ ಬೆಳೆಗಳಿಗೆ ರೂ.೮ ಹಾಗೂ ತೋಟಗಾರಿಕೆ ಬೆಳೆಗೆ ರೂ.೪೦ ನೀರಾವರಿ ಶುಲ್ಕವನ್ನು ನಿಗದಿಪಡಿಸಲಾಗಿದೆ.

ನೀರಿನ ದಂಡ : ನೀರಾವರಿ ಇಲಾಖೆಯಿಂದ ಪರವಾನಗಿ ಪಡೆಯದೆ ನೀರನ್ನು ಬಳಸಿಕೊಂಡರೆ ಸಾಮಾನ್ಯ ನೀರಿನ ದರದ ೧೫ ಪಟ್ಟು ಹಾಗೂ ಅಧಿಸೂಚಿತ ಬೆಳೆಗಳಿಗೆ ಬದಲು ಬೇರೆ ಬೆಳೆ ಬೆಳೆದರೆ, ಸಾಮಾನ್ಯ ದರದ ೧೦ ಪಟ್ಟು ಹೆಚ್ಚು ದಂಡ ವಿಧಿಸಲಾಗುತ್ತದೆ.

ಸರ್ವೇಕ್ಷಣ ಇಲಾಖೆಯು ಸಿದ್ಧಪಡಿಸಿದ ಪಹಾನಿಸೂಡ್ ಹಾಗೂ ಆಕರಬಂದಿ ದಫ್ತರುಗಳ ನೆರವಿನೊಂದಿಗೆ ಗ್ರಾಮಲೆಕ್ಕಿಗರು ಖೇತ್‌ವಾರು ದಾಖಲೆಯನ್ನು ರಚಿಸಿಕೊಳ್ಳುತ್ತಾರೆ. ಇದನ್ನಾಧರಿಸಿ ಗ್ರಾಮದ ಜಮೀನಿನ ವಾಸ್ತವಿಕ ಪರಿಸ್ಥಿತಿಯನ್ನು ದಾಖಲಿಸುತ್ತಾರೆ. ಇದು ಜಮೀನಿನ ಒಡೆತನ, ಗೇಣಿ, ಆಕರ ಹಾಗೂ ಬೆಳೆಗಳ ಬಗ್ಗೆ ಮಾಹಿತಿಯನ್ನು ಹೊಂದಿರುವ ಪ್ರಮುಖ ಕಂದಾಯ ದಾಖಲೆಯಾಗಿದೆ. ಭೂಒಡೆತನಕ್ಕೆ ಸಂಬಂಧಿಸಿದ ಎಲ್ಲಾ ಮಾರ್ಪಾಡುಗಳನ್ನು ಇದರಲ್ಲಿ ದಾಖಲಿಸಲಾಗುತ್ತದೆ. ಈ ಮೂಲ ದಾಖಲೆಗಳನ್ನು ತಾಲೂಕು ಕಚೇರಿಯಲ್ಲಿ ಸಂರಕ್ಷಿಸಿಡಲಾಗುತ್ತಿದ್ದು, ಐದು ವರ್ಷಗಳಿಗೊಮ್ಮೆ ಈ ದಾಖಲೆಯನ್ನು ನವೀಕರಿಸಲಾಗುತ್ತದೆ. ಖಾತ ದಫ್ತರ್ ಇನ್ನೊಂದು ಮಹತ್ವದ ದಾಖಲೆಯಾಗಿದ್ದು, ಪ್ರತೀ ವರ್ಷ ಜುಲೈ ಒಂದರಂದು ತೆರೆಯಲಾಗುವ ಇದರಲ್ಲಿ ಅರ್.ಟಿ.ಸಿ. ಖಿರ್ದಿ (ದಿನವಹಿಕಡತ) ರಸೀತಿ ಪುಸ್ತಕ, ಭೂಕಂದಾಯಕ್ಕೆ ಸಂಬಂಧಿಸಿದಂತೆ ಖಾತದಾರನ ಬಾಕಿ ವಿವರ, ಪರಿವರ್ತನಾ ಶುಲ್ಕ ಹಾಗೂ ಇತರೆ ದಂಡ ಇತ್ಯಾದಿ ಮಾಹಿತಿ ಇರುತ್ತದೆ. ಈ ದಫ್ತರನ್ನು ಜೂನ್ ೩೦ರಂದು ಮುಕ್ತಾಯಗೊಳಿಸಿ ಗ್ರಾಮಗಳ ವಾರ್ಷಿಕ ಲೆಕ್ಕಪತ್ರವನ್ನು ಅಂತಿಮಗೊಳಿಸಲಾಗುತ್ತದೆ. ಆಯಾ ರೈತರ ಬಳಿ, ಅವರವರ ಜಮೀನಿಗೆ ಸಂಬಂಧಿಸಿದಂತೆ, ಇರುವ ಪಟ್ಟ ಅಥವಾ ರೈತರ ರಸೀತಿ ಪುಸ್ತಕದಲ್ಲಿ, ರೈತನು ಪಾವತಿಸಿದ ಕಂದಾಯ ಹಾಗೂ ಬಾಕಿ ವಿವರಗಳಿರುತ್ತವೆ. ಗ್ರಾಮಲೆಕ್ಕಿಗನು ನೋಂದಣಿಗೊಂಡ ಎಲ್ಲಾ ಭೂವ್ಯವಹಾರಗಳನ್ನು ಅಯಾ ರೈತರ ಪಟ್ಟದಲ್ಲಿ ಕಡ್ಡಾಯವಾಗಿ ನಮೂದಿಸಬೇಕು. ಅಲ್ಲದೆ ರೈತನು ಸರ್ಕಾರದಿಂದ ಪಡೆಯುವ ಸಾಲ, ಕೊಡಬೇಕಾದ ಬಾಕಿ, ಅಡಮಾನ ವಿವರಗಳನ್ನೂ ಇದರಲ್ಲಿ ದಾಖಲಿಸಲಾಗುತ್ತದೆ. ಇದನ್ನು ಕಂದಾಯ ದಾಖಲೆ ಶಿರಸ್ತೆದಾರರು ಪರಿಶೀಲಿಸಿ ದೃಢೀಕರಿಸುತ್ತಾರೆ. ಸಹಾಯಕ ಆಯುಕ್ತರು ಹಾಗೂ ತಹಶೀಲ್ದಾರರು ತಪಾಸಣೆ ಪ್ರವಾಸ ಸಂದರ್ಭದಲ್ಲಿ ಇವನ್ನು ರೈತನ ಮೌಖಿಕ ವಿವರಣೆಯೊಂದಿಗೆ ತಾಳೆ ಮಾಡುವ ಮೂಲಕ ಪರಿಶೀಲಿಸುತ್ತಾರೆ.

ವಾರ್ಷಿಕ ಲೆಕ್ಕಾಚಾರ (ದಿಲ್ವಾರು) : ಪ್ರತೀ ವರ್ಷ ಜೂನ್ ಅಂತ್ಯಕ್ಕೆ ಪ್ರತಿ ಗ್ರಾಮದ ವಾರ್ಷಿಕ ಲೆಕ್ಕಪತ್ರವನ್ನು ಸಿದ್ಧಪಡಿಸಿ, ತಾಲೂಕು ಕಚೇರಿಯ ದಫ್ತರಿನೊಂದಿಗೆ ತಾಳೆ ಮಾಡಿ ಪರಿಶೀಲಿಸಿ ಗ್ರಾಮಗಳಿಂದ ಸರ್ಕಾರಕ್ಕೆ ಬರಬೇಕಾದ ಬಾಕಿ ಹಾಗೂ ವಾಸ್ತವಿಕ ಕಂದಾಯ ಸಂಗ್ರಹ ವಿವರಗಳನ್ನು ಖಚಿತಪಡಿಸಿಕೊಳ್ಳಲಾಗುತ್ತದೆ.

ಜಮಾಬಂದಿ : ಇದು ಪ್ರತೀ ಗ್ರಾಮದ ಕಂದಾಯ ಆಡಳಿತವನ್ನು ಪರಿಶೀಲಿಸುವ ಉದ್ದೇಶವನ್ನು ಹೊಂದಿರುವ ವಾರ್ಷಿಕ ಜಮಾಬಂದಿ ಪದ್ಧತಿ. ಬಹು ಹಿಂದಿನಿಂದಲೂ ರೂಢಿಯಲ್ಲಿದೆ. ಹಿಂದೆ ಇದನ್ನು ದಸರಾ ರಜೆಯ ನಂತರ ಆರಂಭಿಸಲಾಗುತ್ತಿದ್ದು, ಜಮಾಬಂದಿ ಕಾರ್ಯದ ರೂಪು ರೇಷೆಯನ್ನು ಜಿಲ್ಲಾಧಿಕಾರಿಗಳು ಅಂತಿಮಗೊಳಿಸುತ್ತಿದ್ದು, ಇದು ಜಮೀನಿನ ಗಡಿ, ಸಾಲುಮರಗಳ ಪ್ರಗತಿ ಹಾಗೂ ಇತರ ನೀರಾವರಿ ಕಾರ್ಯಗಳ ಪರಿಶೀಲನೆಯನ್ನು ಹೊಂದಿರುತ್ತಿತ್ತು. ಆದರೆ ಕ್ರಮೇಣ ಗ್ರಾಮಲೆಕ್ಕಿಗರ ಲೆಕ್ಕಪತ್ರ ಪರಿಶೀಲನೆ, ತಕರಾರು ತಃಖ್ತೆ ಹಾಗೂ ದರಖಾಸ್ತುಗಳನ್ನು ಬಗೆಹರಿಸುವುದು, ಪಟ್ಟಾಗಳ ವರ್ಗಾವಣೆಗೆ

ಸಂಬಂಧಿಸಿದ ವ್ಯಾಜ್ಯಗಳನ್ನು ಬಗೆಹರಿಸುವುದು, ಸರ್ಕಾರ ವಿವಿಧ ಕಂದಾಯಗಳ ಆಕರ, ಸ್ವೀಕಾರ ಹಾಗೂ ಬಾಕಿ ಬಗ್ಗೆ ಸೂಕ್ಷ್ಮವಾಗಿ ಪರಿಶೀಲಿಸುವುದೇ ಮುಂತಾದವೂ ಸೇರಲ್ಪಟ್ಟವು. ಅಲ್ಲದೇ ಸರ್ಕಾರಿ ಭೂಮಿಯ ಒತ್ತುವರಿ, ಗ್ರಾಮದ ಸಾಗುವಳಿ ಸ್ಥಿತಿಗತಿಗಳನ್ನು ಪರಿಶೀಲಿಸುವುದೂ ಜಮಾಬಂದಿ ಅಧಿಕಾರಿಯ ಕರ್ತವ್ಯವಾಗಿರುತ್ತದೆ.

ದಿತ್ತಂ ಜಮಾಬಂದಿ ಹಾಗೂ ಹುಜೂರು ಜಮಾಬಂದಿ, ಜಮಾಬಂದಿಯ ಎರಡು ವಿಧಗಳಾಗಿದ್ದು, ದಿತ್ತಂ ಜಮಾಬಂದಿಯನ್ನು ಆಯಾ ತಾಲೂಕಿನ ತಹಶೀಲ್ದಾರರು ನಡೆಸುತ್ತಾರೆ. ಇದನ್ನು ಡಿಸೆಂಬರ್ ತಿಂಗಳ ಅಂತ್ಯದ ವೇಳೆಗೆ ಹುಜೂರು ಜಮಾಬಂದಿಗೆ ಪೂರ್ವಭಾವಿಯಾಗಿ ಒಂದು ತಿಂಗಳು ಮೊದಲೇ ಮುಗಿಸಬೇಕಾಗುತ್ತದೆ. ಈ ಜಮಾಬಂದಿಯಲ್ಲಿ ಹಿಂದಿನ ಕಂದಾಯ ಸಾಲಿನ ಲೆಕ್ಕವನ್ನು ಮುಕ್ತಾಯಗೊಳಿಸಿ, ಪ್ರಸ್ತುತ ಸಾಲಿನ ಕಂದಾಯ ಲೆಕ್ಕವನ್ನು ಸಿದ್ಧಪಡಿಸಲಾಗುತ್ತದೆ. ಆ ಸಂದರ್ಭದಲ್ಲಿ ಹಿಂದಿನ ಸಾಲಿನ ಒಂಭತ್ತು ಪ್ರಕಾರದ ದಾಖಲೆಗಳನ್ನು ಹಾಗೂ ಪ್ರಸ್ತುತ ಸಾಲಿಗಾಗಿ ೧೩ ವಿವಿಧ ದಾಖಲೆಗಳನ್ನು ಪರಿಶೀಲಿಸಲಾಗುತ್ತದೆ.

ಜಿಲ್ಲಾಧಿಕಾರಿ ಅಥವಾ ಉಪವಿಭಾಗಾಧಿಕಾರಿಗಳು ಅಕ್ಟೋಬರ್-ಡಿಸೆಂಬರ್ ತಿಂಗಳಲ್ಲಿ ನಡೆಸುವ ವಾರ್ಷಿಕ ಲೆಕ್ಕಪತ್ರ ತಪಾಸಣೆಯೇ ಹುಜೂರು ಜಮಾಬಂದಿ ಆಗಿದ್ದು, ಆ ಸಂದರ್ಭದಲ್ಲಿ ಹಿಂದಿನ ವರ್ಷದ ಗ್ರಾಮಲೆಕ್ಕಪತ್ರಗಳ ತಪಾಸಣೆ ಹಾಗೂ ದೃಢೀಕರಣ ಮಾಡುವುದರ ಜೊತೆಗೆ, ಚಾಲ್ತಿ ವರ್ಷದ ಕಂದಾಯ ಹಾಗೂ ಇತರ ಬಾಕಿಗಳ ಬಗ್ಗೆ ನಿರ್ಧರಿಸಲಾಗುತ್ತದೆ. ಜಮಾಬಂದಿ ಅಧಿಕಾರಿಯು ಗ್ರಾಮ ಅಥವಾ ವಲಯಕ್ಕೆ ಭೇಟಿ ನೀಡಿದಾಗ ರೈತರ ಅಹವಾಲುಗಳನ್ನು ಆಲಿಸಿ, ಪರಿಹರಿಸಲು ಅನುಕೂಲವಾಗುವಂತೆ ಜಮಾಬಂದಿ ದಿನಾಂಕವನ್ನು ಪೂರ್ವಭಾವಿಯಾಗಿ ತಿಳಿಸಲಾಗುತ್ತದೆ. ಜಮಾಬಂದಿಯಾದ ೧೫ ದಿನದೊಳಗೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗುತ್ತದೆ.

ಭೂಕಂದಾಯ ವಸೂಲಿ : ಅನಾದಿಕಾಲದಿಂದಲೂ ಕಂದಾಯ ಪಾವತಿಸುವುದು ರೈತಾಪಿ ಜನರ ಋಣಭಾರವಾಗಿತ್ತು. ಆರಂಭದಲ್ಲಿ ಧಾನ್ಯರೂಪದಲ್ಲೂ, ನಾಣ್ಯಪದ್ಧತಿ ಚಲಾವಣೆಗೆ ಬಂದ ನಂತರ ಧನರೂಪದಲ್ಲೂ ಕಂದಾಯ ಸಂಗ್ರಹಿಸಲಾಗುತ್ತಿದ್ದು, ಕೆಲವೊಮ್ಮೆ ಧನ-ಧಾನ್ಯ ರೂಪಗಳೆರಡರಲ್ಲೂ ಸಂಗ್ರಹಿಸಲಾಗುತ್ತಿತ್ತು. ಕಾಲದಿಂದ ಕಾಲಕ್ಕೆ ಕಂದಾಯ ಪ್ರಮಾಣದಲ್ಲಿ ವ್ಯತ್ಯಾಸವಿದ್ದು, ಉತ್ಪನ್ನದ ೧/೬ ಭಾಗದಿಂದ ೧/೨ ಭಾಗವನ್ನು ತೆರಿಗೆಯಾಗಿ ಸಂಗ್ರಹಿಸುತ್ತಿದ್ದುದಕ್ಕೆ ಶಾಸನಾಧಾರಗಳಿವೆ. ಹಿಂದೆ ಫೆಬ್ರವರಿಯಿಂದ ಮೇ ತಿಂಗಳವರೆಗೆ ನಾಲ್ಕು ಕಂತುಗಳಲ್ಲಿ ಭೂಕಂದಾಯ ಸಲ್ಲಿಸಲು ಅವಕಾಶವಿತ್ತು. ಆದರೆ ೧೯೬೪ರ ಕರ್ನಾಟಕ ಭೂಕಂದಾಯ ಅಧಿನಿಯಮದನ್ವಯ ಭೂಕಂದಾಯ ಹಾಗೂ ಇತರೆ ಬಾಕಿ ವಸೂಲಿಯನ್ನು ಜನವರಿಯಿಂದ ಜೂನ್‌ವರೆಗೆ ಮಾಡಲಾಗುತ್ತದೆ. ಭೂಕಂದಾಯವನ್ನು ನಾಲ್ಕು ಸಮಾನ ಕಂತುಗಳಲ್ಲಿ ಜನವರಿಯಿಂದ ಏಪ್ರಿಲ್ ತಿಂಗಳವರೆಗೆ ಆಯಾ ತಿಂಗಳ ೨೦ನೆಯ ತಾಲೂಕಿನೊಳಗೆ ಪಾವತಿಸಬೇಕಾಗಿದ್ದು, ಐದು ರೂ.ಗಿಂತ ಕಡಿಮೆ ಕಂದಾಯವಿದ್ದಲ್ಲಿ ಜನವರಿ ತಿಂಗಳಲ್ಲೇ ಪೂರ್ಣ ಪಾವತಿಸಬಹುದಾಗಿದೆ.

ಕಂದಾಯ ಮಾಫಿ : ಪ್ರಾಚೀನ ಕಾಲದಲ್ಲೂ ಅತಿವೃಷ್ಟಿ-ಅನಾವೃಷ್ಟಿಗಳಿಂದಾಗಿ ಕ್ಷಾಮ ಡಾಮರಗಳು ಬಂದ ಸಂದರ್ಭದಲ್ಲಿ ಕಂದಾಯ ಮನ್ನಾ ಮಾಡುವ ಸಂಪ್ರದಾಯವಿತ್ತು. ಆದರೆ ಅದನ್ನು ಸಮರ್ಥಿಸುವ ಶಾಸನಾಧಾರಗಳು ವಿರಳವಾಗಿದ್ದರೂ, ಕೌಟಿಲ್ಯನ ಅರ್ಥಶಾಸ್ತ್ರವೂ ಸೇರಿದಂತೆ ಅನೇಕ ಧರ್ಮಗ್ರಂಥಗಳಲ್ಲಿ ಈ ಬಗ್ಗೆ ಪ್ರಸ್ತಾಪವಿದೆ. ಆದರೂ ೧೯೨೨ರವರೆಗೆ ಸಂಸ್ಥಾನದಲ್ಲಿ ಕಂದಾಯ ಮನ್ನಾಕ್ಕೆ ಸಂಬಂಧಿಸಿದಂತೆ, ಯಾವುದೇ ನಿರ್ದಿಷ್ಟ ಕಾಯ್ದೆಗಳಿರಲಿಲ್ಲ. ಆದರೆ ೧೯೨೨ರ ಕಾಯ್ದೆಯು ನೀರಾವರಿ ಜಮೀನುಗಳಿಗಷ್ಟೆ ಕಂದಾಯ ಮಾಫಿ ಸೌಕರ್ಯವನ್ನು ಕಲ್ಪಿಸಿದ್ದು, ರದ್ದು ಮಾಡಿದ್ದ ಕಂದಾಯವನ್ನು ಮರುವರ್ಷ ಪಾವತಿಸಬೇಕಾಗಿತ್ತು. ೧೯೬೪ರ ಭೂಕಂದಾಯ ಕಾಯ್ದೆಯನ್ವಯ ಜಿಲ್ಲಾಧಿಕಾರಿ ಹಾಗೂ ತಹಶೀಲ್ದಾರರು ಅಂತಹ ಪ್ರದೇಶಗಳಲ್ಲಿ ಪ್ರಯೋಗಾರ್ಥವಾಗಿ ಕೆಲವೆಡೆ ಬೆಳೆಯನ್ನು ಕಟಾವು ಮಾಡಿ, ಇಳುವರಿ ಆಧಾರದ ಮೇಲೆ ಆದ ನಷ್ಟವನ್ನು ಪರಿಗಣಿಸಿ, ಕಂದಾಯ ಮನ್ನಾ ನೀತಿಯನ್ನು ನಿರ್ಧರಿಸುತ್ತಿದ್ದರು. ಆಗ ಜಮೀನಿನ ಬೆಳೆವಾರು ಸರಾಸರಿ ಇಳುವರಿಯು ಎಕರೆಗೆ ಶೇ. ೩೫ ಕ್ಕಿಂತ ಕಡಿಮೆ ಇದ್ದರೆ ಪೂರ್ಣಕಂದಾಯ ರದ್ದತಿ ಮಾಡುತ್ತಿದ್ದು, ಶೇ. ೩೬-೫೦ ಇಳುವರಿಯಾದಲ್ಲಿ ಕಂದಾಯ ರದ್ದತಿಗೆ ಅವಕಾಶವಿರಲಿಲ್ಲ. ಇದು ತಾತ್ಕಾಲಿಕ ರದ್ಧತಿಯಾಗಿದ್ದು, ಮರುವರ್ಷ ಚಾಲ್ತಿ ಕಂದಾಯದೊಂದಿಗೆ ಹಿಂದಿನ ವರ್ಷದ್ದನ್ನೂ ಸಂಗ್ರಹಿಸಲಾಗುತ್ತಿತ್ತು. ಕೆಲವೊಮ್ಮೆ ವಾರ್ಷಿಕ ಬರಗಾಲಕ್ಕೆ ತುತ್ತಾದ ಪ್ರದೇಶಗಳಿಗೆ ಮೂರು ವರ್ಷ ಅವಧಿ ಕಂದಾಯ ಮಾಫಿ ನೀಡುವ ಅಧಿಕಾರವಿತ್ತು. ಆದರೆ ಅವನ್ನು ನಾಲ್ಕನೆಯ ವರ್ಷದಲ್ಲಾದರೂ ಬೆಳೆ ಆಧಾರದ ಮೇಲೆ ಪಾವತಿಸಬೇಕಿತ್ತು. ರಾಜ್ಯ ಸರ್ಕಾರದ ೧೯೬೬ರ ಕಾಯ್ದೆಯಂತೆ ಎರಡು ಹೆಕ್ಟೇರು ಮಳೆಯಾಶ್ರಿತ ಜಮೀನನ್ನು ಹೊಂದಿರುವ ಸಣ್ಣ ಹಿಡುವಳಿದಾರರಿಗೆ ಕಂದಾಯ ಮಾಫಿ ನೀಡಲು ಅವಕಾಶವಿದ್ದರೂ ಒಂದು ರೂಪಾಯನ್ನು ಕಂದಾಯ ದಾಖಲೆ ನಿರ್ವಹಣೆಗಾಗಿ ಸಂಗ್ರಹಿಸಲಾಗುತ್ತಿತ್ತು. ಮುಂದೆ ೧೯೮೦ರಲ್ಲಿ ಈ ಸವಲತ್ತನ್ನು ನಾಲ್ಕು ಎಕರೆವರೆಗಿನ ಮಳೆಯಾಶ್ರಿತ ಇಲ್ಲವೇ ನೀರಾವರಿಯಾಶ್ರಿತ ಜಮೀನುಗಳಿಗೂ ವಿಸ್ತರಿಸಲಾಯಿತು. ನಿಯಮದಂತೆ ನಾನಾಕಾರಣಗಳಿಂದ ತಾಲೂಕಿನಲ್ಲಿ ಕ್ಷಾಮಡಾಮರಗಳು ಎದುರಾದ ಸಂದರ್ಭದಲ್ಲಿ ಕಂದಾಯ ಮಾಫಿ ನೀಡಲಾಗುತ್ತದೆ.

ಇನಾಂಭೂಮಿ : ಪ್ರಾಚೀನ ಕಾಲದಲ್ಲಿ ಧಾರ್ಮಿಕ ಕಾರಣಗಳಿಗಾಗಿ ದೇವಾಲಯ, ಧಾರ್ಮಿಕ ಸಂಸ್ಥೆಗಳಿಗೆ, ಯೋಧರಿಗೆ, ವಿವಿಧ ವ್ಯಕ್ತಿಗಳಿಗೆ ಭೂಮಿಯನ್ನು ಉಂಬಳಿಯಾಗಿ ನೀಡಲಾಗುತ್ತಿತ್ತು. ಆದರೆ ೧೮ನೆಯ ಶತಮಾನದಿಂದೀಚೆಗೆ ಜಮೀನನ್ನು ಇನಾಂ ನೀಡುವ ಪದ್ಧತಿ ಇಳಿಮುಖಗೊಂಡಿತು. ೧೯ನೆಯ ಶತಮಾನದಲ್ಲಿ ಧರ್ಮಛತ್ರ, ತೋಪು, ಕೆರೆ, ಸಾಲುಮರ, ಮುಂತಾಗಿ ಸಮಾಜಕಲ್ಯಾಣ ಕಾರ್ಯಗಳಿಗೆ ಮಾತ್ರ ಇದು ಸೀಮಿತವಾಗಿತ್ತು. ಆದರೂ ಸರ್ವಮಾನ್ಯ, ಜೋಡಿ ಹಾಗೂ ಕಾಯಂಗುತ್ತ ಗ್ರಾಮಗಳು ಚಾಲ್ತಿಯಲ್ಲಿದ್ದವು. ಈ ಸಂಬಂಧ ೧೮೬೮ರಲ್ಲಿ ಇನಾಂ ಆಯೋಗವನ್ನು ರಚಿಸಲಾಗಿತ್ತು. ೧೮೮೬-೧೯೩೨ರ ಅವಧಿಯಲ್ಲಿ ಅನೇಕ ಇನಾಂ ಆಯೋಗಗಳು

ರಚಿಸಲ್ಪಟ್ಟಿದ್ದು, ಇನಾಂ ಗ್ರಾಮಗಳ ರದ್ದತಿಗಾಗಿ ಒತ್ತಾಯವಿತ್ತು. ಈ ಸಂಬಂಧ ೧೯೪೮ರಲ್ಲಿ ರಚಿಸಲ್ಪಟ್ಟಿದ್ದ ಸಮಿತಿಯು ನೀಡಿದ ಶಿಫಾರಸ್ಸಿನಂತೆ ೧೯೫೫ರಲ್ಲಿ ಮೈಸೂರು ಇನಾಂ ರದ್ದತಿ ಕಾಯ್ದೆ ಹಾಗೂ ಮೈಸೂರು ಧಾರ್ಮಿಕ ದತ್ತಿ ರದ್ಧತಿ ಕಾಯ್ದೆಗಳು ಜಾರಿಗೆ ಬಂದವು. ಅದರಂತೆ ಆಗ ತಾಲೂಕಿನಲ್ಲಿದ್ದ ಜೋಡಿಗ್ರಾಮ ಹಾಗೂ ಇನಾಂ ಭೂಮಿಗಳೂ ರದ್ದಾದವು. ಆದರೆ, ಧಾರ್ಮಿಕ ಸಂಸ್ಥೆಗಳಿಗೆ ಇನಾಂಗೆ ಬದಲು ತಸ್ತಿಕ್ ಭತ್ಯೆಯನ್ನು ನಿಗದಿಪಡಿಸಿ ನೀಡಲು ಸರ್ಕಾರ ಕ್ರಮ ತೆಗೆದುಕೊಂಡಿತು. ಈ ಭತ್ಯೆಯನ್ನು ಆ ಸಂಸ್ಥೆಯು ಅಸ್ತಿತ್ವದಲ್ಲಿರುವವರೆಗೆ ವರ್ಷಂಪ್ರತಿ ನೀಡಲಾಗುತ್ತದೆ. ಇದು ಸಾಮಾನ್ಯವಾಗಿ ಸಂಸ್ಥೆಯ ಐದು ವರ್ಷದ ಆದಾಯಕ್ಕೆ ಸಮನಾಗಿದ್ದು, ಮೊತ್ತವನ್ನು ಜಿಲ್ಲಾಧಿಕಾರಿ ನಿರ್ಧರಿಸುತ್ತಾರೆ. ಇದೇ ರೀತಿ ೧೯೬೧ರ ಕರ್ನಾಟಕ ಭೂಸುಧಾರಣಾ ಕಾಯ್ದೆಯನ್ವಯ ಇನಾಂ ಜಮೀನು ಕಳೆದುಕೊಂಡ ಸಂಸ್ಥೆಗಳಿಗೂ ತಸ್ತಿಕ್ ಭತ್ಯೆಯನ್ನು ನೀಡಲಾಗುತ್ತಿದ್ದು, ಅದರ ವಾರ್ಷಿಕ ಮಂಜೂರಾತಿಯನ್ನೂ ಜಿಲ್ಲಾಧಿಕಾರಿಗಳೇ ನೀಡುತ್ತಾರೆ.

ಭೂಸುಧಾರಣೆ : ಗೇಣಿದಾರಿ ಸಮಸ್ಯೆಯನ್ನು ಬಗೆಹರಿಸಲು ೧೯೫೭ರಲ್ಲಿ ಬಿ.ಡಿ. ಜತ್ತಿ ಅವರ ಅಧ್ಯಕ್ಷತೆಯಲ್ಲಿ ಮೈಸೂರು ಗೇಣಿದಾರಿ ಹಾಗೂ ಕೃಷಿಭೂಮಿ ಕಾನೂನು ಸಮಿತಿಯನ್ನು ರಚಿಸಲಾಯಿತು. ಆ ಸಮಿತಿ ನೀಡಿದ ಶಿಫಾರಸ್ಸನ್ನು ಆಧರಿಸಿದ ಕಾಯ್ದೆಗೆ ೧೯೬೨ರಲ್ಲಿ ರಾಷ್ಟ್ರಪತಿಗಳ ಸಮ್ಮತಿ ಲಭಿಸಿ ಅದು ೧೯೬೫ರ ಅಕ್ಟೋಬರ್‌ನಲ್ಲಿ ರಾಜ್ಯದಲ್ಲಿ ಜಾರಿಗೆ ಬಂದಿತು. ಇದು ಮೇಲಿಂದ ಮೇಲೆ ೧೯೭೪ರವರೆಗೆ ಆರು ಬಾರಿ ತಿದ್ದುಪಡಿ ಕಂಡಿತು. ಅಂತಿಮ ತಿದ್ದುಪಡಿ (೧೯೭೪) ಪ್ರಕಾರ 'ಉಳುವವನಿಗೆ ಭೂಮಿ' ಎಂಬುದೇ ಘೋಷಣಾ ಮಂತ್ರವಾಯಿತು. ಅದರಂತೆ ಕೃಷಿ ಕಾರ್ಮಿಕರು, ಭೂರಹಿತ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರು, ಭೂಒಡೆಯರಾಗಲು ಸಾಧ್ಯವಾಯಿತು. ಈ ಕಾಯ್ದೆಯ ಪ್ರಕಾರ ಕುಟುಂಬವು ಗಂಡ–ಹೆಂಡತಿ, ಅವರ ಅಪ್ರಾಪ್ತ ವಯಸ್ಸಿನ ಗಂಡು ಹಾಗೂ ಅವಿವಾಹಿತ ಹೆಣ್ಣುಮಕ್ಕಳುಗಳನ್ನು ಒಳಗೊಂಡಿದ್ದು, ಪ್ರತೀ ಕುಟುಂಬವು ಹೊಂದಿರಬಹುದಾದ ಜಮೀನಿನ ಗರಿಷ್ಟ ಮಿತಿಯನ್ನು ಕಡಿಮೆ ಮಾಡಲಾಯಿತು. ಅಲ್ಲದೇ ಕೃಷಿಯೇತರ ಮೂಲಗಳಿಂದ ವಾರ್ಷಿಕ ರೂ. ೧೨,೦೦೦ಕ್ಕಿಂತ ಹೆಚ್ಚು ವರಮಾನವನ್ನು ಪಡೆಯುವವರು ನಿಶ್ಚಿತ ಕರಾರುಗಳ ಹೊರತಾಗಿ, ಭವಿಷ್ಯದಲ್ಲಿ ಕೃಷಿ ಜಮೀನು ಖರೀದಿಸುವುದನ್ನು ಈ ಶಾಸನ ನಿಷೇಧಿಸಿತು. ಈ ಕಾಯ್ದೆಯನ್ವಯ ಸೈನಿಕರು ಹಾಗೂ ನಾವಿಕರ ಹೊಲಗಳನ್ನು ಹೊರತುಪಡಿಸಿ ಉಳಿದಂತೆ ಇದ್ದ ಗೇಣಿದಾರಿ ಪದ್ಧತಿ ರದ್ದಾಗಿ ಭೂಮಾಲೀಕ–ಗೇಣಿದಾರ ಸಂಬಂಧ ಅಂತ್ಯವಾಯಿತು. ಸ್ವಂತ ಉಳುಮೆ ಮಾಡುವವರಿಗೆ ಮಾತ್ರ ಭೂ ಒಡೆತನದ ಹಕ್ಕನ್ನು ಈ ಕಾಯ್ದೆ ನೀಡುತ್ತದೆ. ಅದರಂತೆ ಕುಟುಂಬದ ಸದಸ್ಯರ ನೆರವಿನೊಂದಿಗೆ ಸ್ವಂತ ಉಳುಮೆ ಇಲ್ಲವೇ ಕೂಲಿಯಾಳುಗಳಿಗೆ ನಗದು ಕೂಲಿ ನೀಡಿ ಉಳಿಮೆ ಮಾಡಿಸಬಹುದೇ ಹೊರತು ಧಾನ್ಯರೂಪದಲ್ಲಲ್ಲ. ಈ ಕಾಯ್ದೆಯನ್ವಯ ತಾಲೂಕು ಮಟ್ಟದಲ್ಲಿ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಾಲ್ವರು ಸರ್ಕಾರೇತರ ಸದಸ್ಯರನ್ನೊಳಗೊಂಡ ಭೂನ್ಯಾಯಮಂಡಳಿಯನ್ನು ಸ್ಥಾಪಿಸಲಾಯಿತು. ಭೂಸುಧಾರಣೆ ಕಾಯ್ದೆಯಿಂದ ಉದ್ಭವಿಸಬಹುದಾದ ಸಮಸ್ಯೆಗಳನ್ನು

ಬಗೆಹರಿಸಿಕೊಳ್ಳಲೆಂದೇ ಇದನ್ನು ರಚಿಸಲಾಗಿದ್ದು, ದುರ್ಬಲ ಗೇಣಿದಾರರ ನೆರವಿಗೆಂದು ಸರ್ಕಾರವು ಕಾನೂನು ಸಲಹಾ ಕೋಶ(ಸೆಲ್)ವನ್ನು ಸಚಿವಾಲಯದಲ್ಲಿ ಸ್ಥಾಪಿಸಿದ್ದು, ಅನ್ಯಾಯಕ್ಕೊಳಗಾದ ಗೇಣಿದಾರರು ರಕ್ಷಣೆ ಪಡೆಯಬಹುದಾಗಿದೆ. ಈ ಕಾಯ್ದೆಯನ್ವಯ ಸರ್ಕಾರ ಸ್ವಾಧೀನಪಡಿಸಿಕೊಂಡ ಹೆಚ್ಚುವರಿ ಭೂಮಿಯನ್ನು ಸ್ಥಾನಭ್ರಷ್ಟ ಗೇಣಿದಾರರಿಗೆ, ಕೃಷಿಕೂಲಿಗಳಿಗೆ, ಭೂರಹಿತರಿಗೆ ಹಾಗೂ ೨೦೦೦ ರೂ.ಗಳಿಗಿಂತ ಕಡಿಮೆ ವಾರ್ಷಿಕ ಆದಾಯವಿರುವ ಮಾಜಿ ಸೈನಿಕರಿಗೆ ವಿತರಿಸಬಹುದಾಗಿದ್ದು, ಹೆಚ್ಚುವರಿ ಭೂಮಿಯ ಶೇ.೫೦ರಷ್ಟು ಭಾಗವನ್ನು ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆಂದೇ ಮೀಸಲಿಡಲಾಗಿದೆ. ತಾಲೂಕುಮಟ್ಟದ ಭೂನ್ಯಾಯಮಂಡಳಿ ತೀರ್ಮಾನದ ವಿರುದ್ಧ ಮೇಲ್ಮನವಿ ಹೋಗಲು ಜಿಲ್ಲಾ ಮಟ್ಟದಲ್ಲಿ ಭೂಸುಧಾರಣಾ ಮೇಲ್ಮನವಿ ಪ್ರಾಧಿಕಾರವು ಕಾರ್ಯನಿರ್ವಹಿಸುತ್ತಿತ್ತು. ಆದರೆ ಇದನ್ನು ೧೯೯೦ರಲ್ಲಿ ಸರ್ಕಾರ ರದ್ದುಗೊಳಿಸಿದೆ.

ಸರ್ಕಾರದ ಭೂಮಿಯನ್ನು ಸಮಾಜದ ದುರ್ಬಲ ವರ್ಗದವರಿಗೆ, ಭೂರಹಿತರಿಗೆ ಹಾಗೂ ಇತರ ಅರ್ಹರಿಗೆ ನೀಡುವ ನೀತಿಯನ್ನು ಆರಂಭದಲ್ಲಿ ಸರ್ಕಾರವು ಅನುಸರಿಸುತ್ತಿತ್ತು. ಆದರೆ ೧೯೬೯ರಿಂದೀಚೆಗೆ ಗ್ರಾಮದಲ್ಲಿ ವಾಸಿಸುವ ಭೂರಹಿತರಿಗೆ ಆದ್ಯತೆಯ ಮೇಲೆ ನೀಡಬೇಕೆಂಬ ನಿಯಮ ಜಾರಿಗೆ ಬಂದಿತು. ಈ ರೀತಿ ಭೂಮಿ ಪಡೆದವರು ಮೂರು ವರ್ಷದೊಳಗೆ ಅದನ್ನು ಸಾಗುವಳಿಗೆ ಒಳಪಡಿಸಬೇಕು. ಸ್ವಂತ ಉಳುಮೆ ಮಾಡಬೇಕು. ಅಲ್ಲದೆ ಅದನ್ನು ೧೫ ವರ್ಷ ಪರಭಾರೆ ಮಾಡುವಂತಿಲ್ಲ. ಈ ಸಂಬಂಧ ಭೂವಿಲೇವಾರಿ ಅರ್ಜಿಯ ಪರಿಶೀಲನೆ, ವಿಚಾರಣೆ ಹಾಗೂ ವಿತರಣೆಗಳ ಉಸ್ತುವಾರಿಯನ್ನು ತಹಶೀಲ್ದಾರರೇ ನೋಡಿಕೊಳ್ಳುತ್ತಾರೆ.

ಸಾರ್ವಜನಿಕ ಹಿತಾಸಕ್ತಿಗಾಗಿ ಯಾವುದೇ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಹಕ್ಕನ್ನು ಹೊಂದಿರುವ ಸರ್ಕಾರ ಆ ಸಂಬಂಧ ೧೯೮೧ರ ಕಾಯ್ದೆಯಂತೆ ಸಾರ್ವಜನಿಕ ತಿಳುವಳಿಕೆಗಾಗಿ ಅಧಿಸೂಚನೆಯನ್ನು ಹೊರಡಿಸಿ ಜಿಲ್ಲಾಧಿಕಾರಿಗಳ ಮೂಲಕ ಪ್ರಕಟಿಸಲಾಗುತ್ತದೆ. ತತ್ಸಂಬಂಧ ಬರುವ ಸಾರ್ವಜನಿಕ ಅಹವಾಲನ್ನು ಜಿಲ್ಲಾಧಿಕಾರಿಗಳು ಆಲಿಸಿ ಪರಿಶೀಲಿಸಿದ ನಂತರ ಸದರಿ ಜಮೀನನ್ನು ಸ್ವಾಧೀನಪಡಿಸಿಕೊಂಡು ಹತ್ತು ಲಕ್ಷದವರೆಗಿನ ಪರಿಹಾರವಾದಲ್ಲಿ ಜಿಲ್ಲಾಧಿಕಾರಿಗಳು, ೨೦ ಲಕ್ಷ ರೂ.ಗಳವರೆಗಾದರೆ ವಿಭಾಗಾಧಿಕಾರಿ (ಪ್ರಸ್ತುತ ಪ್ರಾದೇಶಿಕ ಆಯುಕ್ತರು)ಗಳಿಗೆ ಹಾಗೂ ೨೦ ಲಕ್ಷಕ್ಕೂ ಹೆಚ್ಚಿನದಾದರೆ ಸರ್ಕಾರ ನೀಡಬಹುದಾಗಿದೆ.

ಇತರ ತೆರಿಗೆಗಳು : ಭೂಕಂದಾಯವಲ್ಲದೇ ಸರ್ಕಾರಕ್ಕೆ ಅನೇಕ ಮೂಲಗಳಿಂದ ತೆರಿಗೆ ರೂಪದಲ್ಲಿ ಆದಾಯ ಬರುತ್ತದೆ. ಅದರಂತೆ ತಾಲೂಕು ಮಟ್ಟದಲ್ಲೂ ಅಬ್ಕಾರಿ ತೆರಿಗೆ, ಮಾರಾಟ ತೆರಿಗೆ, ಮನರಂಜನಾ ತೆರಿಗೆ, ವಿದ್ಯುತ್ ತೆರಿಗೆ, ಕೃಷಿ ವರಮಾನ ತೆರಿಗೆ, ವೃತ್ತಿತೆರಿಗೆ, ಭೋಗ ಸವಲತ್ತು ತೆರಿಗೆ, ಸ್ಟ್ಯಾಂಪು ನೋಂದಣಿ ತೆರಿಗೆ, ಮೋಟಾರು ವಾಹನ ತೆರಿಗೆ ಅರಣ್ಯಾಭಿವೃದ್ಧಿ ತೆರಿಗೆ ಮುಂತಾದ ರಾಜ್ಯ ಮಟ್ಟದ ತೆರಿಗೆಗಳು ರಾಜ್ಯ ಬೊಕ್ಕಸಕ್ಕೆ ಕಾಯ್ದೆಯಂತೆ ಸಂದಾಯವಾಗುತ್ತಿದೆ. ಅಲ್ಲದೆ ಕೇಂದ್ರ ಸರ್ಕಾರದ

ನಿಯಂತ್ರಣದಲ್ಲಿ ಬರುವ ವರಮಾನ ತೆರಿಗೆ ಮುಂತಾದ ಕೇಂದ್ರ ಸರ್ಕಾರದ ತೆರಿಗೆಗಳಿಂದಲೂ ಸ್ವಲ್ಪಭಾಗ ರಾಜ್ಯ ಸರ್ಕಾರಕ್ಕೆ ಸಂದಾಯವಾಗುತ್ತದೆ.

ಗ್ರಾಮ ಪಂಚಾಯತಿಗಳ ಹಿನ್ನೆಲೆ : ಭಾರತದಲ್ಲೇ ಪ್ರಥಮ ಬಾರಿಗೆ ಮೈಸೂರಿನಲ್ಲಿ ೧೮೮೧ರಲ್ಲಿ ಆರಂಭವಾದ 'ಪ್ರಜಾಪ್ರತಿನಿಧಿ ಸಭೆ'ಯಲ್ಲಿ ಇಂದಿನ ಭಾರತೀಯ ಪ್ರಜಾಪ್ರಭುತ್ವದ ಬೀಜಾಂಕುರವನ್ನು ಗುರುತಿಸಬಹುದು. ೧೮೯೧ರಲ್ಲಿ ಚುನಾವಣೆ ಪದ್ಧತಿಯೂ ರೂಢಿಗೆ ಬಂದಿತ್ತು. ೧೯೦೩ರಲ್ಲಿ ಎಂಟು ಜಿಲ್ಲಾ ಬೋರ್ಡ್‌ಗಳು ೭೭ ತಾಲೂಕು ಬೋರ್ಡ್‌ಗಳು ಹಾಗೂ ೩೮೦ ಯೂನಿಯನ್‌ಗಳು ಸ್ಥಾಪನೆಯಾದವು. ೧೯೧೮ರಲ್ಲಿ ಮೈಸೂರು ಸ್ಥಳೀಯ ಸಂಸ್ಥೆಗಳ ಮತ್ತು ಗ್ರಾಮಪಂಚಾಯತಿಗಳ ಕಾನೂನು ಅಂಗೀಕೃತವಾಯಿತು. ಇದರಿಂದ ಪ್ರತಿಯೊಂದು ಹಳ್ಳಿಗೆ ಅಥವಾ ಹಳ್ಳಿಗಳ ಗುಂಪಿಗೆ ಪ್ರತ್ಯೇಕವಾದ ಸಂಪನ್ಮೂಲ ಹಾಗೂ ಕರ್ತವ್ಯಗಳನ್ನು ಹೊಂದಿರುವ ಗ್ರಾಮ ಪಂಚಾಯಿತಿಗಳು ಅಸ್ತಿತ್ವಕ್ಕೆ ಬಂದವು. ಈ ಗ್ರಾಮ ಪಂಚಾಯತಿಗಳ ನಿಯಂತ್ರಣ, ಮೇಲ್ವಿಚಾರಣೆಯ ಅಧಿಕಾರ ತಾಲೂಕು ತಹಸೀಲ್ದಾರರದಾಗಿತ್ತು. ೧೯೩೧ರಿಂದ ಪ್ರಾಥಮಿಕ ಶಿಕ್ಷಣದ ನಿರ್ವಹಣೆ, ನಿಯಂತ್ರಣ ಮತ್ತು ಹಣಕಾಸಿನ ಅಧಿಕಾರ ಗ್ರಾಮಪಂಚಾಯತಿಗೆ ಸೇರಿತು. ೧೯೫೩ರಲ್ಲಿ ಮೈಸೂರು ಗ್ರಾಮ ಪಂಚಾಯತ್ ಮತ್ತು ಜಿಲ್ಲಾ ಬೋರ್ಡ್‌ಗಳ ಅಧಿನಿಯಮ ಜಾರಿಯಾಯಿತು.

೧೯೫೯ರಲ್ಲಿ ಜಾರಿಯಾದ 'ಕರ್ನಾಟಕ ಸ್ಥಳೀಯ ಮಂಡಳಿಗಳ ಮತ್ತು ಗ್ರಾಮ ಪಂಚಾಯತಿಗಳ ಕಾಯ್ದೆ' ಪ್ರಕಾರ ೧೫೦೦ಕ್ಕಿಂತ ಹೆಚ್ಚು ಹಾಗೂ ೧೦,೦೦೦ಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿದ್ದ ಕಂದಾಯ ಹಳ್ಳಿಗಳ ಒಂದು ಗುಂಪಿಗೆ ಒಂದು ಗ್ರಾಮ ಪಂಚಾಯತಿ ರಚಿಸಿ ಪ್ರತಿ ಗ್ರಾಮ ಪಂಚಾಯಿತಿಗೆ ಹಳ್ಳಿಯ ಭೂಗಂದಾಯ ಸಂಗ್ರಹಣೆಯ ಶೇ.೩೦ ಹಾಗೂ ವಿವೇಚನಾಧಿನ ಷರತ್ತಿನಲ್ಲಿ ಶೇ.೧೦ರಷ್ಟು ಅನುದಾನಗಳನ್ನು ನೀಡಲಾಯಿತು. ರಸ್ತೆ, ಬೀದಿದೀಪ, ನೈರ್ಮಲ್ಯ, ಸಾಂಕ್ರಾಮಿಕ ರೋಗ ನಿಯಂತ್ರಣ, ಆರ್ಥಿಕ ಸ್ಥಿತಿಗತಿಗಳ ಅಭಿವೃದ್ಧಿ, ಗ್ರಾಮೀಣ ಕೈಗಾರಿಕೆಗಳಿಗೆ ಪ್ರೋತ್ಸಾಹ, ವಿವಾದ ಪರಿಹಾರ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಕಲ್ಯಾಣ, ಕುಟುಂಬ ಯೋಜನಾ ತಿಳಿವಳಿಕೆ, ಮಕ್ಕಳ ಶಿಕ್ಷಣ, ವೈದ್ಯಕೀಯ ಪರಿಹಾರ, ಮಾರುಕಟ್ಟೆ ನಿರ್ವಹಣೆ ಇತ್ಯಾದಿ ಜವಾಬ್ದಾರಿಗಳನ್ನು ಗ್ರಾಮ ಪಂಚಾಯತಿಗೆ ವಹಿಸಲಾಯಿತು.

ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲೂಕು ಪಂಚಾಯಿತಿ ಸಮಿತಿ ಮತ್ತು ನ್ಯಾಯ ಪಂಚಾಯತ್ಸ್ ಆಕ್ಟ್ ೧೯೮೩ ಕಾಯಿದೆಯು ೮೫ರಿಂದ ಜಾರಿಗೆ ಬಂದು ಜಿಲ್ಲಾ ಪರಿಷತ್ತು, ತಾಲೂಕು ಪಂಚಾಯತಿ ಸಮಿತಿ, ಮಂಡಲ ಪಂಚಾಯತಿಗಳು ಕಾರ್ಯರೂಪಕ್ಕೆ ಬಂದವು. ಪಂಚಾಯತಿ ರಾಜ್ ಸಂಸ್ಥೆಗಳಲ್ಲಿ ಜನತೆಯ ಸಹಭಾಗಿತ್ವವನ್ನು ಹೆಚ್ಚಾಗಿ ಅಧಿಕಾರ ವಿಕೇಂದ್ರೀಕರಣವನ್ನು ಸಾಧಿಸುವುದು ಈ ಕಾಯ್ದೆಯ ಪ್ರಧಾನ ಉದ್ದೇಶವಾಗಿತ್ತು. ಒಂದು ನಿರ್ದಿಷ್ಟ ಪ್ರದೇಶದ ಆಡಳಿತ ನಡೆಸುವ ಸಂಸ್ಥೆಗಳನ್ನು ಸ್ವಯಮಾಡಳಿತ ಸಂಸ್ಥೆಗಳೆಂದು ಕರೆಯಲಾಯಿತು. ಈ ಸಂಸ್ಥೆಗಳು, ಗ್ರಾಮಪಂಚಾಯತಿ,

ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳೆಂಬ ಮೂರು ಹಂತಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದವು. ಇವುಗಳ ಸದಸ್ಯರು ಐದು ವರ್ಷಗಳ ಅವಧಿಗೆ ಜನರಿಂದ ನೇರವಾಗಿ ಆಯ್ಕೆಯಾಗುತ್ತಿದ್ದು, ಪ್ರತಿ ಹಂತದಲ್ಲೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಮಹಿಳೆಯರಿಗೆ ಮೀಸಲು ಸ್ಥಾನಗಳಿದ್ದವು.

ಮುಂದೆ ಗ್ರಾಮ ಸ್ವರಾಜ್ ವ್ಯವಸ್ಥೆಯನ್ನು ಉತ್ತಮಪಡಿಸುವ ದೃಷ್ಟಿಯಿಂದ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಯನ್ನು ೧೯೯೩ರಲ್ಲಿ ಜಾರಿಗೊಳಿಸಲಾಯಿತು. ಈ ಮೊದಲು ಕಾರ್ಯ ನಿರ್ವಹಿಸುತ್ತಿದ್ದ ಮಂಡಲ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ, ಸಮಿತಿಗಳ ಸ್ಥಾನದಲ್ಲಿ ಗ್ರಾಮಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯ್ತಿಗಳು ಕಾರ್ಯಾರಂಭ ಮಾಡಿದವು. ಜಿಲ್ಲಾ ಪರಿಷತ್ ಸ್ಥಾನವನ್ನು ಜಿಲ್ಲಾ ಪಂಚಾಯತ್ ಪಡೆಯಿತು. ತಾಲ್ಲೂಕು ಪಂಚಾಯತಿಯಲ್ಲಿ ಸಾಮಾನ್ಯ ಸ್ಥಾಯಿ ಸಮಿತಿ, ಹಣಕಾಸು ಸಮಿತಿ, ಲೆಕ್ಕಪರಿಶೋಧನಾ ಸಮಿತಿ, ಯೋಜನಾ ಸಮಿತಿ ಹಾಗೂ ಸಾಮಾಜಿಕ ನ್ಯಾಯ ಸಮಿತಿಗಳೂ ಇದ್ದು, ಇದೇ ರೀತಿ ಜಿಲ್ಲಾ ಮಟ್ಟದಲ್ಲೂ ಈ ಸಮಿತಿಗಳು ಕಾರ್ಯನಿರ್ವಹಿಸುತ್ತಿವೆ. ಗ್ರಾಮ ಪಂಚಾಯಿತಿಯಲ್ಲಿ ಉತ್ಪಾದನಾ ಸಮಿತಿ, ಸಾಮಾಜಿಕ ನ್ಯಾಯ ಸಮಿತಿ ಮತ್ತು ಸೌಕರ್ಯಗಳ ಸಮಿತಿಗಳು ಇರುತ್ತವೆ. ಒಂದು ವೇಳೆ ಈ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರಗಳನ್ನು ದುರುಪಯೋಗ ಮಾಡಿದರೆ ಅಥವಾ ಸಮರ್ಪಕವಾಗಿ ಕೆಲಸ ಮಾಡದೆ ತಪ್ಪು ಮಾರ್ಗ ಹಿಡಿದರೆ ಅವುಗಳನ್ನು ಸರ್ಕಾರ ವಿಸರ್ಜಿಸಬಹುದಾಗಿದೆ.

ಆ ಪ್ರಕಾರ, ನಂಜನಗೂಡು ತಾಲ್ಲೂಕಿನಲ್ಲಿ ಒಟ್ಟು ೪೫ ಗ್ರಾಮಪಂಚಾಯತಿಗಳು ಮತ್ತು ಎಂಟು ಜಿಲ್ಲಾ ಪಂಚಾಯತ್ ಕ್ಷೇತ್ರಗಳು, ೧೯೦ (೧೭೬ ಜನವಸತಿ ಹಾಗೂ ೧೪ ನಿರ್ವಸತಿ) ಗ್ರಾಮಗಳು ಮತ್ತು ೯೯ ಉಪಗ್ರಾಮಗಳಿವೆ (ವಿವರಗಳಿಗೆ ಕಂದಾಯ ಗ್ರಾಮಗಳ ಪಟ್ಟಿ ನೋಡುವುದು).

ರಾಂಪುರ, ಮರಳೂರು, ದುಗ್ಗಹಳ್ಳಿ, ಕೆಂಪಸಿದ್ದನಹುಂಡಿ, ಹಗಿನವಾಳು, ಶಿರಮಳ್ಳಿ, ಹುರಾ, ಕುರಿಹುಂಡಿ, ಮಲ್ಲೂಪುರ, ತಾಂಡವಪುರ, ಹುಳಿಮಾವು, ಹದಿನಾರು ತುಮ್ಮನೇರಳೆ, ಹೊಸಕೋಟೆ, ತಾಯೂರು, ಬಿಳಿಗೆರೆ, ನಗರ್ಲೆ, ತಗಡೂರು, ಕಾರ್ಯ, ದಾಸನೂರು, ಸುತ್ತೂರು, ಕೋಣನೂರು, ನೇರಳೆ, ಕೂಡ್ಲಾಪುರ, ಸಿಂಧುವಳ್ಳಿ, ನವಿಲೂರು, ದೇವಿರಮ್ಮನಹಳ್ಳಿ, ದೇಬೂರು, ನಲ್ಲಿತಾಳಪುರ, ಹಲ್ಲರೆ, ದೇವರಾಯಶೆಟ್ಟಿಪುರ, ದೊಡ್ಡಕವಲಂದೆ, ಹೆಮ್ಮರಗಾಲ, ಹೆಡತಲೆ, ದೇವನೂರು, ಬದನವಾಳು, ಹೊರಳವಾಡಿ, ದೇವರಸನಹಳ್ಳಿ, ಕಳಲೆ, ಕಸುವಿನಹಳ್ಳಿ, ಹೆಗ್ಗಡಹಳ್ಳಿ, ಹುಲ್ಲಹಳ್ಳಿ, ಹರದನಹಳ್ಳಿ, ಹಾಡ್ಯ, ಹೆಡಿಯಾಲ–ಇವು ತಾಲ್ಲೂಕಿನ ಗ್ರಾಮ ಪಂಚಾಯತಿಗಳು. ಬದನವಾಳು, ತಗಡೂರು, ಹದಿನಾರು, ಬಿಳಿಗೆರೆ, ದೊಡ್ಡಕವಲಂದೆ, ಕಳಲೆ, ಹುರಾ ಮತ್ತು ಹುಲ್ಲಳ್ಳಿ – ಇವು ಜಿಲ್ಲಾ ಪಂಚಾಯತಿ ಕ್ಷೇತ್ರಗಳು. ಇವುಗಳ ಜತೆಯಲ್ಲಿ ಪ್ರತಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲೂ ಒಂದು ಗ್ರಾಮಸಭೆ ಇದ್ದು ಗ್ರಾಮಾಭಿವೃದ್ಧಿಗೆ ಸಂಬಂಧಿಸಿದಂತೆ

ಗ್ರಾಮಪಂಚಾಯತಿಗೆ ಶಿಫಾರಸ್ಸು ಮತ್ತು ಸಲಹೆಗಳನ್ನು ನೀಡುವ ಅಧಿಕಾರವನ್ನು ಹೊಂದಿರುತ್ತದೆ. ಗ್ರಾಮಗಳ ನೈರ್ಮಲ್ಯ ಮತ್ತು ಆರೋಗ್ಯ ಪಾಲನೆ; ಲೋಕೋಪಯೋಗಿ ಕಾಮಗಾರಿ; ಕೃಷಿ, ಪಶುಸಂಗೋಪನೆ, ಅರಣ್ಯಾಭಿವೃದ್ಧಿ; ಕೈಗಾರಿಕೆ ಪ್ರೋತ್ಸಾಹ; ಮಹಿಳೆ, ಮಕ್ಕಳು ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ; ಶಿಕ್ಷಣ ಮತ್ತು ಗ್ರಂಥಾಲಯ ವ್ಯವಸ್ಥೆ-ಇವು ಈ ಸ್ಥಳೀಯ ಸಂಸ್ಥೆಗಳ ಪ್ರಮುಖ ಕರ್ತವ್ಯಗಳಾಗಿರುತ್ತವೆ. ಇದಲ್ಲದೆ ರಾಜ್ಯದಲ್ಲಿನ ಗ್ರಾಮ ಪಂಚಾಯಿತಿಗಳ ಕಾರ್ಯನಿರ್ವಹಣೆಯಲ್ಲಿ ಹೆಚ್ಚಿನ ಪಾರದರ್ಶಕತೆ ತಂದು ಕಾರ್ಯದಕ್ಷತೆ ಹೆಚ್ಚಿಸುವ ನಿಟ್ಟಿನಲ್ಲಿ ದಿ: ೨೧-೭-೨೦೦೪ ರಿಂದ ಪಂಚಾಯಿತಿ ಜವಾಬಂದಿ ಕಾರ್ಯಕ್ರಮವನ್ನು ಜಾರಿಗೆ ತರಲಾಗಿದೆ. ಪ್ರತಿಯೊಂದು ಗ್ರಾಮಪಂಚಾಯಿತಿಯ ದಾಖಲೆ ಪುಸ್ತಕಗಳನ್ನು ಸಾರ್ವಜನಿಕರ ಪರೀಕ್ಷೆಗೆ ಒಳಪಡಿಸುವ ಕಾರ್ಯಕ್ರಮ ಇದಾಗಿದೆ.

ಆಡಳಿತ ತರಬೇತಿ : ಗ್ರಾಮೀಣ ಅಭಿವೃದ್ಧಿಗೆ ಸಂಬಂಧಿಸಿದಂತೆ ಅಗತ್ಯವಿರುವ ಜ್ಞಾನ ಮತ್ತು ಪರಿಣತಿಗಳನ್ನು ಗಳಿಸಿಕೊಳ್ಳಲು ತರಬೇತಿಯ ಅಗತ್ಯವಿದೆ. ಅನಕ್ಷರಸ್ಥ ಸದಸ್ಯರಿಗೆ ೧೫ ದಿನಗಳಲ್ಲಿ ಅಕ್ಷರ ಜ್ಞಾನ ಕಲಿಸುವ ತರಬೇತಿ ಶಿಬಿರವನ್ನು ಜಿಲ್ಲಾ ಪಂಚಾಯತ್ ನಡೆಸುತ್ತಿದೆ. ಅದರಂತೆ, ಈ ರೀತಿಯ ತರಬೇತಿಗಳನ್ನು ಕಲಾ ಜಾಥಾ, ಗುಂಪು ಚರ್ಚೆ, ಉಪನ್ಯಾಸ, ಜನಾಂದೋಲನ, ಬೀದಿನಾಟಕ, ಹಾಡುಗಳು, ಕಿರುಚಿತ್ರ ಪ್ರದರ್ಶನ, ನೃತ್ಯನಾಟಕ ಇತ್ಯಾದಿಗಳ ಮೂಲಕ ನೀಡಲಾಗುತ್ತಿದೆ. ಮುಖಾಮುಖಿ ಚರ್ಚೆ, ವಿಚಾರ ವಿನಿಮಯ, ವಿಚಾರ ಸಂಕಿರಣ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಪಾತ್ರವೂ ಗಮನಾರ್ಹವಾಗಿದೆ. ಮೈಸೂರಿನ ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ತರಬೇತಿ ಸಂಸ್ಥೆ ಈ ನಿಟ್ಟಿನಲ್ಲಿ ಮಹತ್ವದ ಪ್ರಯತ್ನಗಳನ್ನು ಮಾಡುತ್ತಿದೆ.

ಪುರಸಭೆ : ತಾಲೂಕಿನ ಏಕೈಕ ಪುರಸಭೆ ನಂಜನಗೂಡು ಪಟ್ಟಣದಲ್ಲಿದೆ. ೧೮೭೩ರಲ್ಲೇ ಒಂದು ತಾತ್ಕಾಲಿಕ ಪುರಸಭಾ ಕಮಿಟಿಯು ನಂಜನಗೂಡಿಗೆ ಮಂಜೂರಾಗಿದ್ದಿತು. ನಂತರ ೧೯೦೮ರಲ್ಲಿ ಮೈಸೂರು ಮುನ್ಸಿಪಲ್ ರೆಗ್ಯುಲೇಷನ್ ಕಾಯ್ದೆ-೧೯೦೬ರನ್ವಯ ಇಲ್ಲಿನ ಪುರಸಭೆಯನ್ನು ಖಾಯಂಗೊಳಿಸಲಾಯಿತು. ೧೯೩೩ರಲ್ಲಿ ಇದಕ್ಕೆ 'ಪಟ್ಟಣ ಪುರಸಭೆ'ಯ ಮಾನ್ಯತೆ ದೊರೆಯಿತು. 'ಕರ್ನಾಟಕ ಮುನ್ಸಿಪಾಲಿಟಿ ಆಕ್ಟ್-೧೯೬೪'ರಂತೆ ೧೯೮೩ರಲ್ಲಿ ನವೀಕರಣಗೊಂಡಿತು. ಸುಮಾರು ೧೧.೨೯ ಚ.ಕಿ.ಮೀ. ವ್ಯಾಪ್ತಿಯನ್ನುಳ್ಳ ಈ ಪುರಸಭೆಯು ೨೭ ವಾರ್ಡುಗಳನ್ನು ಹೊಂದಿದ್ದು ೭೧ ಕಿ.ಮೀ. ಪುರಸಭೆ ರಸ್ತೆಯನ್ನು ಪಡೆದಿದೆ. ಕಪಿಲಾ ನದಿಯಿಂದ ಪಟ್ಟಣಕ್ಕೆ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದ್ದು, ನಗರದ ದೈನಂದಿನ ಬೇಡಿಕೆ ೪ ಲಕ್ಷ ಗ್ಯಾಲನ್ ಇದ್ದು ತಲಾ ೭೫ ಲೀಟರ್ ಅನ್ನು ಒದಗಿಸಲಾಗುತ್ತದೆ. ೨೦೦೭-೦೮ರ ಸಾಲಿನಲ್ಲಿ ಪುರಸಭೆಗೆ ರೂ. ೫೧೬.೭೨ ಲಕ್ಷ ಆದಾಯ ಬಂದಿದ್ದು, ೨೮೯.೨೮ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿತ್ತು.

ಆರಂಭದಿಂದ ಉಪ–ವಿಭಾಗಾಧಿಕಾರಿಗಳ ಮೇಲ್ವಿಚಾರಣೆಯಲ್ಲಿಯೇ ಇದ್ದ ಪುರಸಭೆಯ ಆಡಳಿತ ೧೯೪೨ರಿಂದ ಚುನಾಯಿತ ಪ್ರತಿನಿಧಿಗಳಿಗೆ ದೊರೆತಿದೆ. ಪ್ರಸ್ತುತ ಪುರಸಭೆಯಲ್ಲಿ ಇಪ್ಪತ್ತೇಳು ವಾರ್ಡ್‌ಗಳಿದ್ದು ಇಪ್ಪತ್ತೇಳು ಮಂದಿ ಚುನಾಯಿತ ಪುರಪಿತೃಗಳಿದ್ದಾರೆ. ನಂಜನಗೂಡಿನ ನಾಗರಿಕ ಸಮಸ್ಯೆಗಳ ನಿವಾರಣೆಗೆ ಇವರೇ ಹೊಣೆಗಾರರು. ಮನೆಗಂದಾಯ, ನೆಲಗಂದಾಯ, ವ್ಯಾಪಾರ ತೆರಿಗೆ, ಸಂತೆ ಸುಂಕ, ನೀರುಗಂದಾಯ, ಸುಂಕದ ಕಟ್ಟೆ ಮೊದಲಾದ ಮೂಲಗಳಿಂದ ಆದಾಯ ಪಡೆಯುವ ಪುರಸಭೆ ಈ ಹಣವನ್ನು ರಸ್ತೆ ದುರಸ್ತಿ, ಆರೋಗ್ಯ ಮತ್ತು ನೈರ್ಮಲ್ಯ ಒಳಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ಪೂರೈಕೆ ಹಾಗೂ ಬೀದಿ ದೀಪಗಳ ವ್ಯವಸ್ಥೆಗಾಗಿ ವಿನಿಯೋಗಿಸುತ್ತದೆ.

ನ್ಯಾಯಾಡಳಿತ

ನ್ಯಾಯ ಮತ್ತು ದಂಡನೆಯ ಪರಿಕಲ್ಪನೆ ಮಾನವ ಸಮಾಜದಷ್ಟೇ ಪುರಾತನವಾದುದು, ಪ್ರತ್ಯಕ್ಷ ದೈವವೆನ್ನಿಸಿಕೊಂಡಿದ್ದ ರಾಜನ ಪ್ರಮುಖ ಕರ್ತವ್ಯವೂ 'ದುಷ್ಟ ಶಿಕ್ಷಣ ಶಿಷ್ಟ ರಕ್ಷಣವಾಗಿದ್ದಿತು. ಗಂಗದೊರೆಗಳ ಕಾಲದಿಂದಲೂ ನ್ಯಾಯ ಪರಿಪಾಲನೆಯಲ್ಲಿ ಈ ಅಂಶವನ್ನು ಗುರುತಿಸಬಹುದು. ರಾಜನಿಗೆ ನ್ಯಾಯದ ಪರಮಾಧಿಕಾರವಿದ್ದರೂ ಅವನಿಗೆ ಧರ್ಮಾಧ್ಯಕ್ಷ, ಧರ್ಮಾಧಿಕರಣ, ನಗರಸಭೆ, ಗ್ರಾಮಸಭೆಗಳ ನೆರವೂ ಇರುತ್ತಿತ್ತು. ನಾಡು, ಮಹಾನಾಡುಗಳ ಮುಖ್ಯಸ್ಥರಿಗೂ ನ್ಯಾಯ ತೀರ್ಮಾನದ ಅಧಿಕಾರವಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ಹಳ್ಳಿಗಳ 'ಸರಪಂಚರು' ನ್ಯಾಯನಿರ್ಣಾಯಕರಾಗಿ ವಹಿಸುತ್ತಿದ್ದ ಪಾತ್ರ ಗಣನೀಯವಾದುದು.

ಸೂಕ್ತ ನ್ಯಾಯ ದೊರಕಿಸಿಕೊಡಲು ಸಾಧ್ಯವಾಗುವ ಎಲ್ಲ ಪ್ರಯತ್ನಗಳನ್ನು ಮಾಡಿಯೂ ಪರಿಸ್ಥಿತಿ ಕೈ ಮೀರಿದರೆ 'ದಿವ್ಯ'ದ ಮೊರೆ ಹೋಗುತ್ತಿದ್ದುದೂ ಉಂಟು. ದಿವ್ಯಗಳಲ್ಲಿ ಕುದಿಯುವ ಎಣ್ಣೆಗೆ ಕೈ ಅದ್ದುವುದು, ಇಲ್ಲವೇ ಕೆಂಪಗೆ ಕಾದ ಸರಳನ್ನು ಹಿಡಿದು ಪ್ರಮಾಣ ಮಾಡುವುದು ಮುಂತಾದ ವಿಧಾನಗಳಿವೆ. ಹದಿನಾರು ಪ್ರಭು ರಾಮರಾಜ ನಾಯಕನ ಕಾಲದಲ್ಲಿ ಕ್ಷೌರಿಕ, ಅಗಸ, ಕುಂಬಾರರ ನಡುವೆ ಎದ್ದ ವಿವಾದವನ್ನು ಈ ರೀತಿಯ 'ದಿವ್ಯ'ದ ಮೂಲಕ ಪರಿಹರಿಸಿಕೊಂಡುದಕ್ಕೆ ಶಾಸನದ ಆಧಾರವಿದೆ. ನಂಜನಗೂಡು ನಂಜುಂಡೇಶ್ವರನ ಮುಂದೆ ಕೂಡ ಈ ರೀತಿಯ ಪ್ರಮಾಣ ಮಾಡಿಸುತ್ತಿದ್ದುದರ ಬಗೆಗೆ ಐತಿಹ್ಯಗಳಿವೆ.

ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಕಾಲದಲ್ಲಿ ಮುಸ್ಲಿಮರಿಗೆ ಸಂಬಂಧಿಸಿದ ನ್ಯಾಯವಿತರಣೆಯ ಅಧಿಕಾರವನ್ನು 'ಖಾಜಿ'ಗಳಿಗೆ ನೀಡಿದ್ದುದಾಗಿ ತಿಳಿದು ಬರುತ್ತದೆ. ಆದರೆ (ಆಂಗ್ಲರ ಆಳ್ವಿಕೆಯಲ್ಲಿ) ಪರಿಸ್ಥಿತಿ ಪೂರ್ಣ ಬದಲಾಯಿತು. ಸ್ಥಳೀಯ ನ್ಯಾಯಸಂಸ್ಥೆಗಳ ಅಧಿಕಾರ ವ್ಯಾಪ್ತಿಯನ್ನು ಆಧುನಿಕ ವಿಧಾನದಲ್ಲಿ ಪುನರ್ ರೂಪಿಸಲಾಯಿತು. ೧೮೬೨ರಿಂದ ೧೮೮೨ರ ವರೆಗೆ ತಾಲೂಕಿನ ಅಮಲ್ದಾರರೇ ತಾಲೂಕು ನ್ಯಾಯವಿತರಣೆಗೆ ಮುಖ್ಯಸ್ಥರಾಗಿದ್ದರು. ಇವರಿಗೆ ಸಹಾಯಕರಾಗಿ ಪೇಷ್ಕಾರರು ಕಾರ್ಯನಿರ್ವಹಿಸುತ್ತಿದ್ದರು.

ತಾಲೂಕು ನ್ಯಾಯಾಲಯಗಳು : ಈ ಅವಧಿಯಲ್ಲೇ ನಂಜನಗೂಡಿನಲ್ಲಿ 'ಮುನ್ಸಿಫ್ ನ್ಯಾಯಾಲಯ'ವಿದ್ದು ಇದಕ್ಕೆ ಯುರೋಪಿಯನ್ ಸೂಪರಿಂಟೆಂಡೆಂಟ್ ಇದ್ದರೆಂಬುದಕ್ಕೆ ದಾಖಲೆ ಇದೆ. ಮೈಸೂರು ಸಿವಿಲ್ ಕೋರ್ಟ್ಸ್ ರೆಗ್ಯುಲೇಷನ್ ಕಾಯ್ದೆ-೧೮೮೩ರನ್ವಯ ನಂಜನಗೂಡು ಮುನ್ಸಿಫ್ ಕೋರ್ಟ್‌ಗೆ ಖಾಯಂ ಸ್ಥಾನವೂ ದಕ್ಕಿತು. ೧೯೨೫ರವರೆಗೂ ಜಿಲ್ಲಾ ಕಮೀಷನರ್ ಅಧೀನದಲ್ಲಿದ್ದ ನ್ಯಾಯಾಲಯಗಳು ನಂತರ ಹೈಕೋರ್ಟ್‌ನ ವ್ಯಾಪ್ತಿಗೆ ಒಳಪಟ್ಟವು. ೧-೧೦-೧೯೬೪ ರಿಂದ ಜಾರಿಗೆ ಬಂದ ಕರ್ನಾಟಕ ಸಿವಿಲ್ ಕೋರ್ಟ್ಸ್ ಆಕ್ಟ್ ಪ್ರಕಾರ ನಂಜನಗೂಡಿನಲ್ಲಿ ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆಯ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಹಾಗೂ ಮುನ್ಸಿಫ್ ಮತ್ತು ಅಡಿಷನಲ್ ಜೆ.ಎಂ.ಎಫ್.ಸಿ ನ್ಯಾಯಾಲಯಗಳು ರೂಪುಗೊಂಡವು. ಸಿವಿಲ್ ಜಡ್ಜ್ ಜೆ.ಎಂ.ಎಫ್.ಸಿ ನ್ಯಾಯಾಲಯದ ವ್ಯಾಪ್ತಿಗೆ ನಂಜನಗೂಡು ಸೇರಿದಂತೆ ಚಾಮರಾಜನಗರ, ಗುಂಡ್ಲುಪೇಟೆ, ಯಳಂದೂರು ತಾಲೂಕುಗಳಿಗೆ ಸಂಬಂಧಿಸಿದ ಸಿವಿಲ್ ಮತ್ತು ಕ್ರಿಮಿನಲ್ ವ್ಯಾಜ್ಯಗಳು ಬರುತ್ತವೆ. ಮುನ್ಸಿಫ್ ಕೋರ್ಟ್‌ನಲ್ಲಿ ನಿರ್ಧಾರವಾದ ವ್ಯಾಜ್ಯಗಳನ್ನು ಮೇಲ್ಮನವಿಯಲ್ಲಿ ಪುನರಾವಲೋಕನ ಮಾಡುವ ಅಧಿಕಾರವೂ ಇದೆ. ಮುನ್ಸಿಫ್ ನ್ಯಾಯಾಲಯವು ನಂಜನಗೂಡು ಮತ್ತು ಗುಂಡ್ಲುಪೇಟೆ ತಾಲೂಕುಗಳ ರೂ.೧೦೦೦೦ಕ್ಕೆ ಒಳಪಟ್ಟ ಸಿವಿಲ್ ಮತ್ತು ಕ್ರಿಮಿನಲ್ ವ್ಯಾಜ್ಯಗಳನ್ನು ಆಲಿಸಿ ಪರಿಹಾರ ನೀಡುತ್ತದೆ.

ಪೊಲೀಸ್ ಆಡಳಿತ ವ್ಯವಸ್ಥೆ

ಪ್ರಾಚೀನ ಕಾಲದಲ್ಲಿ ಊರಿನಲ್ಲಿ ಕಳ್ಳತನ ಮತ್ತು ಡಕಾಯಿತಿಗಳನ್ನು ತಡೆಯುವ ಹೊಣೆಗಾರಿಕೆ, ಗ್ರಾಮಕೂಟದ 'ಗೌಡ'ರ ಮೇಲೆ ಇರುತ್ತಿತ್ತು. 'ಪಟೇಲ' ಎಂಬ ಹೆಸರೂ ಇವರಿಗಿರುತ್ತಿತ್ತು. ಇವರ ಸಹಾಯಕ್ಕೆ 'ತಳವಾರ'ರು ಇದ್ದರು. ಮೈಸೂರು ಅರಸರ ಕಾಲದಲ್ಲಿ ಈ ಉದ್ದೇಶಕ್ಕೇ 'ಕಂದಾಚಾರ'ವೆಂಬ ಇಲಾಖೆಯನ್ನು ಪ್ರಾರಂಭಿಸಿ ಇದರ ನೇತೃತ್ವವನ್ನು 'ದಳವಾಯಿ'ಗಳಿಗೆ ಒಪ್ಪಿಸಲಾಗಿತ್ತು. ಠಾಣೇದಾರ, ಹೋಬ್ಳಿದಾರರು ಪಟ್ಟಣ, ಹೋಬಳಿಗಳ ಶಿಸ್ತು ನ್ಯಾಯ ವ್ಯವಸ್ಥೆಯನ್ನು ಎಚ್ಚರಿಕೆಯಿಂದ ಗಮನಿಸುತ್ತಿದ್ದರು, ಇವರಿಗೆ 'ಓಲೆಕಾರ'ರು ಸುದ್ದಿಯ ಸಾಗಾಟಕ್ಕೆ ಹಾಗೂ 'ಡಂಗುರ'ದವರು ಸುದ್ದಿಯ ಹರಡುವಿಕೆಗೆ ನೆರವಾಗುತ್ತಿದ್ದರು. ಊರಿಂದ ಊರಿಗೆ ಸಾಗಿಸಲಾಗುತ್ತಿದ್ದ ವ್ಯಾಪಾರಿಗಳ ಸರಕನ್ನು ಕಳ್ಳಕಾಕರು ದೋಚದಂತೆ ಹಲವಾರು ರಕ್ಷಣಾಕ್ರಮವನ್ನು ರೂಢಿಸಲಾಗಿತ್ತು. ದಿವಾನ್ ಪೂರ್ಣಯ್ಯನವರ ಕಾಲದಲ್ಲಿ 'ಕಂದಾಚಾರ'ದ ಸೈನಿಕರ ಸಂಖ್ಯೆ ಹೆಚ್ಚಿಸಿ ಅವರಿಗೆ ಅಪರಾಧಿಗಳನ್ನು ಹಿಡಿಯುವ, ಸೆರೆಮನೆಯ ಕಾವಲಿನ ಕೆಲಸಗಳನ್ನು ವಹಿಸಲಾಯಿತು. ೧೮೩೪ರಲ್ಲಿ ಪೊಲೀಸ್ 'ಹುಕುಂನಾಮ' ಜಾರಿಯಾದ ಮೇಲೆ ಈ 'ಕಂದಾಚಾರ'ದ ಸೇವಕರನ್ನೇ ಪೊಲೀಸ್ ಸೇವಕರನ್ನಾಗಿ ಬದಲಿಸಿ ಇವರನ್ನು ತಾಲೂಕು ಜೈಲು ಮತ್ತು ಖಜಾನೆಗಳ ಕಾವಲು ಮತ್ತು ಕಂದಾಯ ಸಂಗ್ರಹಣೆಗೆ ನೆರವು ನೀಡುವುದು ಇತ್ಯಾದಿ ತಾಲೂಕು ಕೆಲಸಗಳಿಗೆ ನೇಮಿಸಿಕೊಳ್ಳಲಾಯಿತು. ಗ್ರಾಮಗಳ ತೋಟಿ ತಳವಾರರು

ಇವರಿಗೆ ನೆರವು ನೀಡುತ್ತಿದ್ದರು. ೧೮೫೬ರ ವೇಳೆಗೆ ಈ ಪೊಲೀಸ್ ವ್ಯವಸ್ಥೆಯು ಜಿಲ್ಲಾಧಿಕಾರಿಯ ವ್ಯಾಪ್ತಿಗೆ ಒಳಪಟ್ಟಿತು. ೧೮೫೯ರಲ್ಲಿ ಭಾರತ ಸರ್ಕಾರದ ಸೈನಿಕ ಆರ್ಥಿಕ ಆಯೋಗವು ಸಿವಿಲ್ ಪೊಲೀಸ್ ಮತ್ತು ಸೈನ್ಯದ ಕರ್ತವ್ಯಗಳನ್ನು ಬೇರೆಬೇರೆಯಾಗಿ ನಿರೂಪಿಸಿದಾಗ ಖಜಾನೆಯ ಕಾವಲು ಕೆಲಸ ಪೊಲೀಸರಿಗೆ ತಪ್ಪಿತ್ತು. ೧೯೦೧ರಲ್ಲಿ ಪೊಲೀಸ್ ಸಮವಸ್ತ್ರವನ್ನು ಜಾರಿಗೆ ತರಲಾಯಿತು.

೧೯೩೦ರ ವೇಳೆಗೆ ನಂಜನಗೂಡಿಗೆ ಒಬ್ಬರು 'ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಆಫ್ ಪೊಲೀಸ್' ನೇಮಕವಾದಾಗ ಉಳಿದ ತಾಲೂಕುಗಳ ವ್ಯಾಪ್ತಿಯನ್ನೂ ಇವರಿಗೇ ವಹಿಸಲಾಯಿತು. ೧೯೩೫ರ ಸಮಯದಲ್ಲಿ ಪೊಲೀಸ್ ಸುವ್ಯವಸ್ಥೆಯ ಜತೆಗೆ ತೆರಿಗೆ ಸಂಗ್ರಹಣೆ, ಮೋಟಾರ್ ವಾಹನಗಳ ನೋಂದಣಿ ಮುಂತಾದ ಹೆಚ್ಚುವರಿ ಕರ್ತವ್ಯವನ್ನು ಇವರಿಗೆ ವಹಿಸಲಾಯಿತು. ೧೯೮೭ರಲ್ಲಿ ನಂಜನಗೂಡಿನಲ್ಲಿ ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಕಚೇರಿ ಆರಂಭವಾಯಿತು. ಈಗ ಈ ಕಛೇರಿಯ ವ್ಯಾಪ್ತಿಗೆ ನಂಜನಗೂಡು ಹಾಗೂ ಟಿ.ನರಸೀಪುರ ತಾಲೂಕುಗಳು ಸೇರಿವೆ.

೨೦೦೯ರ ಮಾರ್ಚ್ ಅಂತ್ಯಕ್ಕೆ ನಂಜನಗೂಡು ವೃತ್ತದಲ್ಲಿದ್ದ ಠಾಣೆಗಳು : ನಂಜನಗೂಡು ಪಟ್ಟಣ, ನಂಜನಗೂಡು ಗ್ರಾಮಾಂತರ, ಬದನವಾಳು ಮತ್ತು ಕವಲಂದೆ ಸೇರಿದಂತೆ ಒಟ್ಟು ಐದು ಪೊಲೀಸ್ ಠಾಣೆಗಳು ತಾಲೂಕಿನಲ್ಲಿದ್ದು, ಒಂದು ಉಪಠಾಣೆಯೂ ಇತ್ತು.

ತಾಲೂಕಿನಲ್ಲಿ ಒಬ್ಬರು ಡಿವೈಎಸ್.ಪಿ., ಇಬ್ಬರು ಸರ್ಕಲ್ ಇನ್‌ಸ್ಪೆಕ್ಟರ್ ಒಂಬತ್ತು ಜನ ಸಬ್ ಇನ್ಸ್‌ಪೆಕ್ಟರ್ ೧೪ ಜನ ಸಹಾಯಕ ಸಬ್.ಇನ್‌ಸ್ಪೆಕರ್, ೬೨ ಜನ ಹೆಡ್ ಕಾನ್‌ಸ್ಟೇಬಲ್, ೧೮೮ ಜನ ಪೊಲೀಸ್ ಕಾನ್‌ಸ್ಟೇಬಲ್ಸ್ ಅಲ್ಲದೆ ಒಬ್ಬರು ಮಹಿಳಾ ಸಬ್ ಇನ್‌ಸ್ಪೆಕ್ಟರ್, ನಾಲ್ಕು ಜನ ಮಹಿಳಾ ಹೆಡ್ ಕಾನ್‌ಸ್ಟೇಬಲ್ಸ್ ಮತ್ತು ೧೪ ಜನ ಮಹಿಳಾ ಪೊಲೀಸ್ ಕಾನ್‌ಸ್ಟೇಬಲ್ಸ್ ನಂಜನಗೂಡು ಉಪವಿಭಾಗದ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ನಂಜನಗೂಡು ಉಪ ವಿಭಾಗದಲ್ಲಿ ದಾಖಲಾದ ಅಪರಾಧಗಳ ವಿವರಗಳು

ಕ್ರ.ಸಂ.	ವಿವರ	೨೦೦೩		೨೦೦೪		೨೦೦೫	
		ಕಳೆದದ್ದು	ಹಿಂದಕ್ಕೆ ಪಡೆದುದು	ಕಳೆದದ್ದು	ಹಿಂದಕ್ಕೆ ಪಡೆದುದು	ಕಳೆದದ್ದು	ಹಿಂದಕ್ಕೆ ಪಡೆದುದು
೧	ಢಕಾಯಿತಿ	೯೦೦,೦೦೦	೮೬೦,೦೦೦	೧೧,೪೮೦	–	೫೯೦,೦೦೦	೧೭,೦೦೦
೨	ಲೂಟಿ	೨೫೫,೦೦೦	೧೦,೦೦೦	೭೨,೯೦೦	೬,೦೦೦	–	–
೩	ಕಳ್ಳತನ	೪೯೪,೦೩೯	೧೧೯,೯೫೦	೫೯೫,೬೯೮	೭೦೭,೩೬೯	೩೫೧,೭೦೦	೨೧೭,೧೫೦
೪	ಇತರೆ ಕಳ್ಳತನ	೭೫೩,೭೮೩	೨೩೧,೨೨೦	೮೨೨,೨೧೪	೩೨೭,೬೧೩	೧,೨೦೦,೯೨೬	೧,೧೨೮,೦೨೩
೫	ಡಬ್ಲ್ಯು.ಎಲ್.ಪಿ ಆಕ್ಟ್	೩೫,೦೦೦	–	–	–	–	–

ಆಧಾರ – ಡಿವೈಎಸ್‌ಪಿ ಕಛೇರಿ. ನಂಜನಗೂಡು.

ದಾಖಲಾದ ಅಸಹಜ ಸಾವು ಪ್ರಕರಣಗಳ ವಿವರ

ಕ್ರ.ಸಂ	ವಿವರ	೨೦೦೩	೨೦೦೪	೨೦೦೫
೧	ನೀರಿನಲ್ಲಿ ಮುಳುಗಿ ಆತ್ಮಹತ್ಯೆ	೨೧	೨೬	೧೫
೨	ಬೆಂಕಿ	೪	೧೩	೫
೩	ನೇಣು	೧೬	೨೧	೧೯
೪	ವಿಷ	೫೮	೬೦	೫೨
೫	ಆಕಸ್ಮಿಕವಾಗಿ ನೀರಿನಲ್ಲಿ ಸಾವು	೧೭	೨೦	೨೯
೬	ಅಪಘಾತ ಮರಣ	೨	೧	–
೭	ಅಪಘಾತದ ಬೆಂಕಿ	೨೫	೨೩	೧೫
೮	ಹಾವು ಕಡಿತ	೪	೧	೪
೯	ಇತರೆ	೪೭	೪೯	೩೫
	ಒಟ್ಟು	**೧೯೪**	**೨೧೪**	**೧೭೪**

ಮೂಲ : ಪೊಲೀಸ್ ಇಲಾಖೆ, ನಂಜನಗೂಡು

ದಾಖಲಾದ ಸಣ್ಣ ಅಪರಾಧಗಳ ವಿವರ

ಕ್ರ.ಸಂ	ಸೆಕ್ಷನ್	೨೦೦೩	೨೦೦೪	೨೦೦೫ ದಾಖಲಾತಿ	ವಿಲೇವಾರಿ
೧	ಐ.ಎಂ.ವಿ ಆಕ್ಟ್	೨೧೩೪	೩೪೨೪	೨೦೩೧	೨೦೦೭
೨	ಕೆ.ಪಿ. ಆಕ್ಟ್	೧೧೪೫	೮೮೮	೫೧೩	೫೧೩
೩	ಧೂಮಪಾನ	೬೨	೮೧	೨೯	೨೯
೪	ಜೂಜು	೪೨	೩೪	೨೩	೨೨

ಆಧಾರ : ಡಿವೈಎಸ್‌ಪಿ ಕಛೇರಿ, ನಂಜನಗೂಡು.

ಕಾರಾಗೃಹಗಳು : ರಾಜ ಮಹಾರಾಜರ ಕಾಲದಲ್ಲಿ ಮುಖ್ಯವಾಗಿ ಯುದ್ಧ ಖೈದಿಗಳನ್ನು ಇರಿಸಲು ಸೆರೆಮನೆಗಳನ್ನು ಬಳಸಲಾಗುತ್ತಿತ್ತು. ಬ್ರಿಟೀಷ್ ಆಕ್ರಮಣದ ಅವಧಿಯಲ್ಲಿ ಸ್ವಾತಂತ್ರ್ಯ ಹೋರಾಟಗಾರರಿಗೇ ಸೆರೆಮನೆ ಶಿಕ್ಷೆ ಪ್ರಧಾನವಾಗಿರುತ್ತಿತ್ತು. ಪ್ರಸ್ತುತ ಅವಧಿಯಲ್ಲಿ ನ್ಯಾಯಾಲಯದಲ್ಲಿ ಶಿಕ್ಷೆಗೊಳಗಾದ ಮತ್ತು ವಿಚಾರಣಾಧೀನ ಖೈದಿಗಳನ್ನು ಸೆರೆಮನೆಯಲ್ಲಿ ಇರಿಸಲಾಗುತ್ತಿದೆ. ನಂಜನಗೂಡು ಉಪ ಬಂಧೀಖಾನೆ ದೇವಾಲಯದ ಬಳಿಯಲ್ಲಿ ೧೯೭೭ ರಲ್ಲಿ ಪ್ರಾರಂಭವಾಯಿತು. ಪ್ರಸ್ತುತ ಜೈಲಿನಲ್ಲಿ ೬೪ ಜನ ವಿಚಾರಣಾಧೀನ ಖೈದಿಗಳಿದ್ದಾರೆ. ಮಹಿಳಾ ಕೈದಿಗಳು ಇಲ್ಲ. ಕೊಲೆ, ದರೋಡೆ, ಅತ್ಯಾಚಾರ, ಕಳ್ಳತನಗಳ ಆರೋಪಗಳನ್ನು ಎದುರಿಸುತ್ತಿರುವ ಖೈದಿಗಳ ಬೌದ್ಧಿಕ ಮಟ್ಟವನ್ನು ಬೆಳೆಸುವ ಪ್ರಯತ್ನಗಳನ್ನೂ ಮಾಡಲಾಗುತ್ತಿದೆ. ಖೈದಿಗಳಿಗೆ ದೂರದರ್ಶನ ಮತ್ತು ಗ್ರಂಥಾಲಯಗಳ ಸೌಲಭ್ಯಗಳನ್ನು ಒದಗಿಸಲಾಗಿದೆ.

ಇತರೇ ಇಲಾಖೆಗಳು

ತಾಲೂಕಿನ ಅಭಿವೃದ್ಧಿಗೆ ಅನೇಕ ಇಲಾಖೆಗಳ ಒಟ್ಟುಗೂಡಿದ ಶ್ರಮ ತೀರಾ ಅವಶ್ಯಕ. ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿರುವ ತಾಲೂಕಿನ ಇಲಾಖೆಗಳಲ್ಲಿ ಮುಖ್ಯವಾದುವುಗಳನ್ನು ಗಮನಿಸಬಹುದು.

ವಾಣಿಜ್ಯ ತೆರಿಗೆ ಇಲಾಖೆ : ವಾಣಿಜ್ಯ ತೆರಿಗೆ ಇಲಾಖೆಗೆ ಸಂಬಂಧಿಸಿದ ಎರಡು ಕಛೇರಿಗಳು ನಂಜನಗೂಡಿನಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಒಂದು, ಸಹಾಯಕ ವಾಣಿಜ್ಯ ತೆರಿಗೆ ಆಯುಕ್ತರ ಕಛೇರಿ, (ಮಧ್ಯಂತರ) ಮತ್ತೊಂದು ವಾಣಿಜ್ಯ ತೆರಿಗೆ ಅಧಿಕಾರಿಗಳ ಕಛೇರಿ(ಮೌಲ್ಯವರ್ಧಿತ ತೆರಿಗೆ). ಈ ಕಛೇರಿಗಳು ನಂಜನಗೂಡು ತಾಲೂಕಿನ ಜೊತೆಗೆ ಟಿ.ನರಸೀಪುರ ಮತ್ತು ಗುಂಡ್ಲುಪೇಟೆ ತಾಲೂಕುಗಳ ವ್ಯಾಪ್ತಿಯನ್ನು ಹೊಂದಿವೆ.

೨೦೦೪-೦೫ನೇ ಸಾಲಿನಲ್ಲಿ ಸಂಗ್ರಹವಾದ ತೆರಿಗೆಯ ವಿವರ

(ಲಕ್ಷಗಳಲ್ಲಿ)

ತೆರಿಗೆ ವಿವರ	ವಾ.ತೆ.ಸ.ಆ.ರ ಕಛೇರಿ	ವಾ.ತೆ.ಅಧಿಕಾರಿ ಕಛೇರಿ
ಕೇಂದ್ರಮಾರಾಟ ತೆರಿಗೆ	೧೫.೧೮ ಲಕ್ಷ	–
ಕರ್ನಾಟಕ ಮಾರಾಟ ತೆರಿಗೆ	೧೩೦.೩೨ ಲಕ್ಷ	೨೯.೮೫ ಲಕ್ಷ
ಕರ್ನಾಟಕ ಪ್ರವೇಶ ತೆರಿಗೆ	೧೦.೫೯ ಲಕ್ಷ	೧.೦೭ ಲಕ್ಷ
ವೃತ್ತಿ ತೆರಿಗೆ	೧೩.೬೭ ಲಕ್ಷ	೧೦.೬೪ ಲಕ್ಷ
ವಿಲಾಸ ತೆರಿಗೆ	೧.೭೪ ಲಕ್ಷ	–
ಪುನರ್ ಮಾರಾಟ ತೆರಿಗೆ	೫೯.೨೦ ಲಕ್ಷ	೧೩.೪೦ ಲಕ್ಷ

ಅಗ್ನಿಶಾಮಕ ದಳ : ಆಕಸ್ಮಿಕ, ಅನಿರೀಕ್ಷಿತ, ಉದ್ದೇಶಪೂರ್ವಕ ಬೆಂಕಿ ಅನಾಹುತ, ಅಪಘಾತ, ಕಟ್ಟಡ ಕುಸಿತದಲ್ಲಿ, ನೆರೆಹಾವಳಿ ಮತ್ತಿತರ ಅಪಾಯಕಾರಿ ಸಂದರ್ಭಗಳಲ್ಲಿ ಮಾಹಿತಿ ಸಿಕ್ಕಿದ ಕೂಡಲೇ ಸಹಾಯಕ್ಕೆ ಧಾವಿಸುವ ಕರ್ತವ್ಯದ ಹೊಣೆಗಾರಿಕೆಯನ್ನು ಅಗ್ನಿಶಾಮಕ ದಳ ನಿರ್ವಹಿಸುತ್ತದೆ. ೧೯೯೯ ರಿಂದ ಈ ಠಾಣೆಯಲ್ಲಿ ೧೩ ಮಂದಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿದ್ದು. ಎರಡು ಅಗ್ನಿಶಾಮಕ ವಾಹನಗಳಿವೆ. ಸರ್ಕಾರಿ ಕರೆ ಹಾಗೂ ಸಾರ್ವಜನಿಕ ಸೇವೆಗಳನ್ನು ಉಚಿತವಾಗಿ ನಿರ್ವಹಿಸಿದರೆ, ಖಾಸಗಿ ಪ್ರಕರಣಗಳಲ್ಲಿ ಒಂದು ದಿನಕ್ಕೆ ೨,೫೦೦/- ರೂ. ಸೇವಾಶುಲ್ಕ ವಿಧಿಸಲಾಗುತ್ತದೆ. **೨೦೦೪-೦೫ನೇ ಸಾಲಿನ ಅಂಕಿಅಂಶಗಳು** : ಸ್ವೀಕರಿಸಿದ ಕರೆಗಳು-೫೨; ಬೆಂಕಿಯಲ್ಲಿ ಸಿಲುಕಿಕೊಂಡ ಆಸ್ತಿಯ ಅಂದಾಜು ಬೆಲೆ - ೧,೪೫,೮೦,೮೦೦/-; ಆಸ್ತಿ ನಷ್ಟ ೮,೨೫,೦೫೦/-; ಆಸ್ತಿ ರಕ್ಷಣೆ-೧,೩೬,೮೩,೭೫೦/-. ಪ್ರತಿ ವರ್ಷದ ಏಪ್ರಿಲ್ ೧೪-೨೧ರವರೆಗೆ ಅಗ್ನಿಶಾಮಕ ಸಪ್ತಾಹವನ್ನಾಗಿ ಆಚರಿಸಿ ಈ ಸಂದರ್ಭದಲ್ಲಿ ಶಾಲಾಮಕ್ಕಳಿಗೆ ಹಾಗೂ ಸಾರ್ವಜನಿಕರಿಗೆ ದುರಂತಗಳನ್ನು ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ ತಿಳಿವಳಿಕೆ ನೀಡಲಾಗುತ್ತದೆ.

ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಕಾರ್ಯನಿರ್ವಹಣಾಧಿಕಾರಿ ಕಛೇರಿ : ಶ್ರೀಕಂಠೇಶ್ವರ ದೇವಾಲಯದ ಆಡಳಿತಕ್ಕಾಗಿ ಕಾರ್ಯನಿರ್ವಹಣಾಧಿಕಾರಿಯ ಕಚೇರಿಯನ್ನು ಆರಂಭಿಸಲಾಗಿದ್ದು, ಇದರ ಮೇಲುಸ್ತುವಾರಿಯಲ್ಲಿ ದೇವಸ್ಥಾನದ ಸಮಸ್ತ ಕಾರ್ಯಕ್ರಮಗಳು ನಡೆಯುತ್ತವೆ. ತಸ್ದೀಕ್, ಹುಂಡಿ, ಸೇವಾರ್ಥ ಮುಂತಾದ ಮೂಲಗಳಿಂದ ಸಂಗ್ರಹಿತವಾಗುವ ಹಣವನ್ನು ದೇವಾಲಯದ ಆದಾಯವೆಂದು ಪರಿಗಣಿಸಲಾಗುತ್ತದೆ. ಈ ದೇವಾಲಯದ ವಾರ್ಷಿಕ ಆದಾಯ ಮೂರು ಕೋಟಿಗೂ ಅಧಿಕವಾಗಿದೆ. ದೇವಸ್ಥಾನದ ಕಾರ್ಯಕ್ರಮಗಳ ಸುಸೂತ್ರ ಚಾಲನೆಗೆ 'ಧರ್ಮದರ್ಶಿ ಸಮಿತಿ'ಯನ್ನು ಈಗ 'ವ್ಯವಸ್ಥಾಪನ ಸಮಿತಿ' ಎಂದು ಪುನರ್ ರಚಿಸಲಾಗಿದ್ದು ಇದರ ಅವಧಿ ಮೂರು ವರ್ಷಗಳಾಗಿದೆ. ಸಾಧಾರಣವಾಗಿ ದೇವಸ್ಥಾನದ ಅರ್ಚಕ ಹುದ್ದೆಯು ವಂಶಪಾರಂಪರ್ಯವಾಗಿದ್ದು ಒಂದು ವೇಳೆ ಅರ್ಚಕರು ವಾರಸುದಾರರಿಲ್ಲದೆ ಮೃತಪಟ್ಟರೆ ಆ ಹುದ್ದೆಯು ಆತನ ಪತ್ನಿ ಅಥವಾ ಮಗಳಿಗೆ ಲಭಿಸುತ್ತದೆ. ಆದರೆ ಮಗಳ ಮಕ್ಕಳಿಗೆ ಈ ಸ್ಥಾನ ಲಭ್ಯವಾಗುವುದಿಲ್ಲ. ಅರ್ಜಿ ಕರೆಯುವುದರ ಮೂಲಕ ಈ ಸ್ಥಾನವನ್ನು ತುಂಬಲಾಗುತ್ತದೆ.

ತಾಲೂಕು ಖಜಾನೆ : ತಾಲೂಕಿಗೆ ಸೇರಿದ ಎಲ್ಲಾ ಸರ್ಕಾರಿ ಕಛೇರಿಗಳ ವೇತನ ಬಟವಾಡೆ, ನಿವೃತ್ತಿವೇತನ ಸಂದಾಯ ಮತ್ತಿತರ ಜವಾಬ್ದಾರಿಗಳು ಈ ಇಲಾಖೆಯದ್ದಾಗಿವೆ.

ವಿದ್ಯುತ್ ಸರಬರಾಜು ನಿಗಮ : ಇತ್ತೀಚೆಗೆ 'ಚಾಮುಂಡೇಶ್ವರಿ ವಿದ್ಯುತ್ ಪ್ರಸರಣ ನಿಗಮ' ಎಂದು ನಾಮಾಂಕಿತವಾದ ವಿದ್ಯುತ್ ಸರಬರಾಜಿಗೆ ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ ನಂಜನಗೂಡಿನಲ್ಲಿದೆ. ಅಲ್ಲದೆ ಸಹಾಯಕ ಅಭಿಯಂತರರ ಕಛೇರಿಗಳು ಹಲ್ಲಹಳ್ಳಿ, ಬದನವಾಳು, ತಗಡೂರುಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.

ಸಮಾಜ ಕಲ್ಯಾಣ ಇಲಾಖೆ : ಇದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದವರನ್ನು ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕವಾಗಿ ಅಭಿವೃದ್ಧಿ ಪಡಿಸಲು ರೂಪುಗೊಂಡಿರುವ ಇಲಾಖೆ. ನಂಜನಗೂಡಿನಲ್ಲಿ ತಾಲೂಕು ಸಮಾಜ ಕಲ್ಯಾಣ ಅಧಿಕಾರಿಗಳ ಕಛೇರಿ ಕಾರ್ಯನಿರ್ವಹಿಸುತ್ತಿದೆ. ೨೦೦೯ರ ಮಾರ್ಚ್ ಅಂತ್ಯಕ್ಕೆ ಇದರ ವ್ಯಾಪ್ತಿಯಲ್ಲಿ ೧೨ ಮೆಟ್ರಿಕ್ ಪೂರ್ವ, ಮೂರು ಮೆಟ್ರಿಕ್ ನಂತರದ ಪರಿಶಿಷ್ಟ ಜಾತಿ ವಿದ್ಯಾರ್ಥಿನಿಲಯಗಳು ಇದ್ದು, ಇವುಗಳಲ್ಲಿ ಒಟ್ಟು ೧,೦೦೦ ವಿದ್ಯಾರ್ಥಿಗಳಿದ್ದಾರೆ. ನಂಜನಗೂಡಿನ ವಿದ್ಯಾಪೀಠದ ಬಳಿ ಮತ್ತು ಎಸ್.ಹೊಸಕೋಟೆಗಳಲ್ಲಿರುವ ಮುರಾರ್ಜಿ ದೇಸಾಯಿ ವಸತಿಶಾಲೆಗಳೂ ಸೇರಿದಂತೆ ತಾಲೂಕಿನಲ್ಲಿರುವ ಇಂತಹ ನಾಲ್ಕು ವಸತಿ ಶಾಲೆಗಳಲ್ಲಿ ೮೦೦ ಮಂದಿ ವ್ಯಾಸಂಗಾರ್ಥಿಗಳಿದ್ದರು. ಅಲ್ಲದೆ ಪರಿಶಿಷ್ಟ ಪಂಗಡದವರಿಗಾಗಿ ತಾಲೂಕಿನಲ್ಲಿದ್ದ ಒಂದು ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯದಲ್ಲಿ ೫೦ ವಿದ್ಯಾರ್ಥಿಗಳಿದ್ದರೆ, ಎರಡು ಆಶ್ರಮ ಶಾಲೆಗಳಲ್ಲಿ ೩೦೦ ವಿದ್ಯಾರ್ಥಿಗಳಿದ್ದರು. ಅಲ್ಲದೆ ತಾಲೂಕಿನ ಕಿತ್ತೂರುರಾಣಿ ಚೆನ್ನಮ್ಮ ವಸತಿಶಾಲೆಯಲ್ಲಿ ೫೦ ವಿದ್ಯಾರ್ಥಿನಿಯರಿದ್ದರು.

ಅಲ್ಲದೆ ಹಿಂದುಳಿದ ವರ್ಗಗಳ ಒಂಬತ್ತು ಮೆಟ್ರಿಕ್ ಪೂರ್ವ ಮತ್ತು ಎರಡು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಒಟ್ಟು ೬೬೦ ವಿದ್ಯಾರ್ಥಿಗಳಿದ್ದರು.

ಸ್ವಸಹಾಯ ಗುಂಪುಗಳ ರಚನೆ (Self help Groups-SHG's)

೧.	ರಚನೆ	–	೬೯೨
೨.	ಸದಸ್ಯರು	–	೧೦೨೬೨
೩.	ಉಳಿತಾಯ	–	೭೩–೬೫ ಲಕ್ಷ
೪.	ಲಿಂಕೇಜ್	–	೩೮೧ ಗುಂಪುಗಳಿಗೆ – ರೂ.೧೪೯.೯೨ ಲಕ್ಷ
೫.	SGSY	–	(೨೦) ಗುಂಪುಗಳಿಗೆ – ೫೫.೧೫ ಲಕ್ಷ
೬.	ಸ್ತ್ರೀಶಕ್ತಿ ಸಂಖ್ಯೆಗಳು	–	೩೧೨
	ಸ್ತ್ರೀಶಕ್ತಿ ಸಾಲ	–	೧೩೬ಕ್ಕೆ ೬೭.೬೮ ಲಕ್ಷ

ಮಹಿಳೆ ಮತ್ತು ಮಕ್ಕಳ ಕಲ್ಯಾಣ : ೮೦ರ ದಶಕದಲ್ಲಿ ಜಾರಿಗೆ ಬಂದ ಮಹಿಳಾ ಮತ್ತು ಕಲ್ಯಾಣ ಇಲಾಖೆಯ ಮೂಲ ಉದ್ದೇಶ ಮಹಿಳೆಯರನ್ನು ಸಶಕ್ತಿಗೊಳಿಸುವುದು ಹಾಗೂ ಶಾಲಾ ಪೂರ್ವ ವ್ಯವಸ್ಥೆಯಲ್ಲಿ ಅಪೌಷ್ಟಿಕತೆ ನಿವಾರಣೆ, ಶುಚಿತ್ವದ ಪರಿಕಲ್ಪನೆ, ಮಕ್ಕಳೊಡನೆ ಬೆರೆಯುವ ಗುಣಗಳನ್ನು ಮಕ್ಕಳ ಮನದಲ್ಲಿ ನಾಟುವಂತೆ ಮಾಡುವ ಉದ್ದೇಶದಿಂದ ಅಂಗನವಾಡಿಗಳನ್ನು ಪ್ರಾರಂಭಿಸಲಾಯಿತು. ಇಂದು ಅಂಗನವಾಡಿ ಕಾರ್ಯಕರ್ತೆಯರು ತಮ್ಮ ವಿಸ್ತಾರವಾದ ಕಾರ್ಯ ಗೌರವಗಳಿಂದ ಗ್ರಾಮೀಣ ಪರಿಸರದಲ್ಲಿ ಪ್ರಧಾನ ಸ್ಥಾನ ಗಳಿಸಿಕೊಳ್ಳುತ್ತಿದ್ದಾರೆ. ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ೫೫೦ ಅಂಗನವಾಡಿ ಕ್ಷೇತ್ರಗಳು ಕಾರ್ಯನಿರ್ವಹಿಸುತ್ತಿದ್ದವು. ಇದು ಜಿಲ್ಲೆಯಲ್ಲೇ ಪ್ರಥಮಸ್ಥಾನ ಪಡೆದಿದೆ. 'ಸ್ತ್ರೀಶಕ್ತಿ ಯೋಜನೆ' ಈ ಸಮಾಜ ಕಲ್ಯಾಣ ಇಲಾಖೆಯ ಮತ್ತೊಂದು ಮಹತ್ವಪೂರ್ಣ ಯೋಜನೆಯಾಗಿದ್ದು ಗ್ರಾಮೀಣ ಪರಿಸರದ ಮಹಿಳೆಯರಿಗೆ ಆರ್ಥಿಕ ಸ್ವಾವಲಂಬನೆ, ಚೈತನ್ಯವನ್ನು ಒದಗಿಸಿಕೊಡುವಲ್ಲಿ ಸಹಕಾರಿಯಾಗಿದೆ. ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿದ್ದ ೧೩೨೦ ಸ್ತ್ರೀಶಕ್ತಿ ಸಂಘಗಳಲ್ಲಿ ಒಟ್ಟು ೨೩,೪೯ ಮಹಿಳಾ ಸದಸ್ಯರಿದ್ದು, ಅವರಲ್ಲಿ ೫,೧೫೪ ಪರಿಶಿಷ್ಟಜಾತಿಗೂ ಹಾಗೂ ೬೧೮, ಪರಿಶಿಷ್ಟ ಪಂಗಡಕ್ಕೂ ಸೇರಿದವರಾಗಿದ್ದರು. ಈ ಸಂಘಗಳು ಒಟ್ಟು ೬,೦೬,೫೦೦ ಠೇವಣಿ ಸಂಗ್ರಹಿಸಿದ್ದು, ಅವುಗಳಲ್ಲಿ ೯೧೪ ಸಂಘಗಳು ರೂ. ೪೭,೦೩,೨೦೦ ಬ್ಯಾಂಕ್ ಸಾಲ ಪಡೆದಿದ್ದು, ಈ ಸಂಬಂಧ ರೂ. ೨.೮೦ ಲಕ್ಷ ಪ್ರೋತ್ಸಾಹ ಧನವನ್ನೂ ಪಡೆದಿವೆ.

* * * *